ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಡಿಸೆಂಬರ್, ೨೦೦೦ ಸಂಚಿಕೆ ೫

★

ಕಾಶ್ಮೀರ್ ಕಾರ್ಯಾಚರಣೆಯ
ಏಕಪಕ್ಷೀಯ ನಿಲುಗಡೆ
ಯಶಸ್ವಿಯಾಗಲಿ.

★

ಈ ಭಾರತ ಬದಲಾಗಬೇಕಲ್ಲವೆ?

★

ರಾಜಕೀಯ ಭ್ರಷ್ಟಾಚಾರದ ಬೇರನ್ನು
ಕೀಳಬಹುದೆ?

★

ಸ್ವರಾಜ್ಯ, ಸ್ವದೇಶಿ, ಸತ್ಯಾಗ್ರಹ

★

ರಾಜ್ಯದ ಹಸ್ತಕ್ಷೇಪ ಕಡಿಮೆ ಇರಬೇಕು.

★ ಈ ಸಂಚಿಕೆಯಲ್ಲಿ ★

ಭತ್ತ ಬೇಯಿಸುತ್ತಾನೆ ಒಕ್ಕಲಿಗ
ಇಟ್ಟಿಗಿ ಸುಡುತ್ತಾನೆ ಕಾರ್ಮಿಕ
ಕಬ್ಬಿಣ ಕಾಸಿ ಬಡಿಯುತ್ತಾನೆ ಕಮ್ಮಾರ
ಹೇಳಿ ಪುರೋಹಿತರೆ ಮಠಾಧಿಪತಿಗಳೆ
ಬಿಶಪ್ಪರೆ ಮುಲ್ಲಾಗಳೆ
ಹೇಳಿ ತಕ್ಕಡಿಯವರೆ
ಕೊಳ್ಳಿ ಇಟ್ಟವರಾರು?
ಪುಂಡು ಪೋಕರಿ ಪುಡಾರಿ ರಾಜಕಾರಣಿಗಳೆ
ಮೀನು ಹಿಡಿಯಲು ಹೋಗಿ ಕೆರೆಗೆ
ವಿಷ ಇಕ್ಕಿದವರೆ
ಹೇಳಿ ಬೆಂಕಿ ಇಟ್ಟವರಾರು?
ಇದೇನು ಗಾಳಿ ಮಾತಲ್ಲ
ಹಾದಿ ಬೀದಿಗಳಲ್ಲಿ ಹೊಲಗದ್ದೆಗಳಲ್ಲಿ
ಕಾರಖಾನೆಗಳಲ್ಲಿ ಜನ
ಆದೇಶಿಸುತ್ತಾರೆ ಮುಷ್ಟಿಬಿಗಿದು;
ಹೇಳಿ ಇದಕ್ಕೆ ಉತ್ತರ
ಬೆಂಕಿ ಇಟ್ಟವರಾರು.
ಮನುಷ್ಯತ್ವವ ಸುಟ್ಟವರಾರು.

– ಆರ್. ವಿ. ಭಂಡಾರಿ

ವಿಚಾರಗಳಿಗೆ ಆಯಾ ಲೇಖಕರೇ
ಹೊಣೆಗಾರರು; ಪ್ರಕಾಶಕರಲ್ಲ.

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೫

ಡಿಸೆಂಬರ್ ೨೦೦೦

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ :
ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಜನಪದ ಸಂಗತಿ ....

ಡಾ|| ರಾಜಕುಮಾರರ ಬಿಡುಗಡೆ ಎಲ್ಲರಿಗೂ ನೆಮ್ಮದಿಯನ್ನು ತಂದಿತು. ನೂರೆಂಟು ದಿನಗಳ ಕಾಲ ಅವರು ಅರಣ್ಯವಾಸವನ್ನು ಅನುಭವಿಸಬೇಕಾಗಿ ಬಂತು, ಅದೂ ಕೂಡ ಒಬ್ಬ ಮಾನವನ ರೂಪದಲ್ಲಿರುವ ರಾಕ್ಷಸನ ಸಹ ವಾಸದಲ್ಲಿ. ಈ ಘಟನೆಯನ್ನು ಸಾಮಾನ್ಯವಾಗಿ ಎರಡು ದೃಷ್ಟಿಗಳಿಂದ ನೋಡಲಾಗುತ್ತಿದೆ. ಒಂದು, ಮಾನವನು ಈ ಲೋಕದಲ್ಲಿ ಅನುಭವಿಸುವುದೆಕ್ಕೆಲ್ಲ ಅವನ ಪೂರ್ವಜನ್ಮದ ಕರ್ಮವೆ ಕಾರಣ; ಇನ್ನೊಂದು, ಅವನಿರುವ ದೇಶ ಕಾಲ – ವರ್ತಮಾನ ಸ್ಥಿತಿ. ಮೊದಲನೆಯ ದೃಷ್ಟಿಕೋನಕ್ಕೆ ಆಧಾರವಿಲ್ಲ; ಅದು ಕೇವಲ ಊಹಾಪೋಹ. ಎರಡನೆಯದಕ್ಕೆ, ವಿಶ್ಲೇಷಣಾತ್ಮಕ ಆಧಾರ ಗಳಿವೆ. ಈಗ ಆಗಬೇಕಾಗಿರುವುದು ಎರಡನೇ ದೃಷ್ಟಿಕೋನ ಆಧಾರಿತ ಕಾರ್ಯಾಚರಣೆ. ಪ್ರಜಾತಂತ್ರ, ಸಮಾನತೆ, ವಿಜ್ಞಾನ, ತಾಂತ್ರಿಕತೆ, ಉಚ್ಚ ಕೋಟಿಯ ಸಾಧನ ಸಾಮಗ್ರಿಗಳು – ಇತ್ಯಾದಿ ಇಂದಿನ ಯುಗಮಂತ್ರಗಳು. ಈ ಮಂತ್ರಗಳಿಂದ ಈಗಲಾದರೂ ವೀರಪ್ಪನ್ ಎಂಬ ಮಾವಿನಕಾಯಿ ಬೇಗ ಉದುರುತ್ತದೆಯೋ ಕಾದು ನೋಡೋಣ!

★

ಪರಮೇಶ್ವರ ಭಟ್ಟ, ಉಷಾ ನವರತ್ನ ರಾಮರಾವ್, ಡಾ॥ ಹಾ.ಮಾ.ನಾ. ನಮ್ಮನ್ನಗಲಿದರು. ಅವರು ಎಂಥ ಧೀಮಂತ ವ್ಯಕ್ತಿಗಳಾಗಿದ್ದರು, ಸರಸ್ವತಿ ಪುತ್ರರಾಗಿದ್ದರೆಂಬುದು ಎಲ್ಲರಿಗೂ ತಿಳಿದ ವಿಷಯ. ಅವರು ನಮಗೆ ಕೊಟ್ಟು ಹೋಗಿರುವ ವಿವಿಧ ಪ್ರಕಾರದ ಸಾಹಿತ್ಯ ಪ್ರಕಾರಗಳು ಕನ್ನಡ ಸಾಹಿತ್ಯದ ಸಿರಿವಂತಿಕೆಯನ್ನು ಹೆಚ್ಚಿಸಿವೆ. ಈಗ ವಾಡಿಕೆಯಂತೆ ಅಗಲಿಹೋದ ಈ ಸಾಹಿತಿಗಳ ನೆನಪನ್ನು ಕುರಿತು ಸಂಘ – ಸಂಸ್ಥೆಗಳೋ, ಪ್ರತಿಷ್ಠಾನಗಳೋ ಹುಟ್ಟಿಕೊಳ್ಳುತ್ತವೆ; ವಿಚಾರಗೋಷ್ಠಿಗಳು ನಡೆಯುತ್ತವೆ; ಸಾಹಿತ್ಯ ಸಮ್ಮೇಳನ ನಡೆದಾಗ ವೇದಿಕೆಗೋ, ಮಂಟಪಕ್ಕೋ ಅವರ ಹೆಸರನ್ನು ಇಡಲಾಗುತ್ತದೆ; ಇನ್ನೂ ಹೆಚ್ಚೆಂದರೆ ಅವರ ಸಮಗ್ರ ಸಾಹಿತ್ಯವನ್ನು ಬಹಳ ಪ್ರಯಾಸದಿಂದ ಪ್ರಕಟಿಸಲಾಗುತ್ತದೆ. ಆದರೆ ಕರ್ನಾಟಕ ಸರ್ಕಾರವಾಗಲೀ, ಕರ್ನಾಟಕದ ಜನತೆಯಾಗಲೀ, ಕರ್ನಾಟಕದಲ್ಲಿ ನೆಲೆಸಿರುವ ಪರಭಾಷಾ ಜನರಾಗಲೀ, ಕರ್ನಾಟಕದಲ್ಲಿ ಬಂದಿರುವ ಕೈಗಾರಿಕೆಗಳಾಗಲೀ, ಕನ್ನಡ ಭಾಷಾ ವಿದ್ಯಾರ್ಥಿ ಗಳಾಗಲೀ, ಬೋಧಕರಾಗಲೀ ಕನ್ನಡತನವನ್ನು ನಿರ್ನಾಮಮಾಡುತ್ತಿರುವಾಗ ಅವರಿಗೆ ನಾವು ಅರ್ಪಿಸುವ ಶ್ರದ್ಧಾಂಜಲಿಗೆ ಏನಾದರೂ ಅರ್ಥವಿದೆಯೆ?

ಕನ್ನಡ ರಾಜ್ಯೋತ್ಸವದ ತಿಂಗಳಲ್ಲಿಯೇ ಅವರು ಕಣ್ಣುಮುಚ್ಚಿದ್ದು ಕಾಕತಾಳೀಯವೇ ಅಥವಾ ಕನ್ನಡಕ್ಕಾಗಿ ಅದು ಅವರ ಬಲಿದಾನವೇ? ಇದು ಚಿಂತನೀಯ ವಿಷಯ.

★

ಇದೇ ನವ್ಹೆಂಬರ್ ತಿಂಗಳಲ್ಲಿ ಭಾರತದ ನಕಾಶೆಯಲ್ಲಿ ಮೂರು ಹೊಸ ರಾಜ್ಯಗಳು ಹುಟ್ಟಿಕೊಂಡವು, ೧. ಛತ್ತೀಸಗಢ್ ೨. ಉತ್ತರಾಂಚಲ್ ೩. ಝಾರಖಂಡ, ಈ ಮೂರು ರಾಜ್ಯಗಳ ರಚನೆಯ ಹಿಂದೆ ರಾಜಕಾರಣಿಗಳ ಅಸಹ್ಯವಾದ ಅಧಿಕಾರದಾಹ ಕಾರಣವಾಗಿದೆ. ವಿಕೇಂದ್ರಿಕೃತ ಸಮಾಜವಾದಿ ಪ್ರಜಾತಂತ್ರದ ವಿಚಾರವು ಕಳೆದ ಐದು ದಶಕಗಳಿಂದ ದೇಶದ ತುಂಬೆಲ್ಲ ಜಾರಿಗೆ ಬಂದಿದ್ದರೆ ಬಹುಶಃ ಈ ರಾಜ್ಯಗಳು ಹುಟ್ಟಿಕೊಳ್ಳುತ್ತಿರಲಿಲ್ಲವೇನೋ, ಈಗಲೂ ಪರಿಸ್ಥಿತಿ ಉತ್ತಮವಾಗಿಲ್ಲ. ಆದ್ದರಿಂದ ಇನ್ನೂ ಹಲವಾರು ರಾಜ್ಯಗಳು ಹುಟ್ಟಿಕೊಳ್ಳುವ ಸೂಚನೆಗಳು ಕಾಣುತ್ತಿವೆ. ಈ ಪ್ರಕ್ರಿಯೆ ಇಷ್ಟಕ್ಕೆ ನಿಲ್ಲದೆ ಈಗ ಹುಟ್ಟಿಕೊಂಡಿರುವ ಮತ್ತು ಮುಂದೆ ಹುಟ್ಟಿಕೊಳ್ಳುವ ರಾಜ್ಯಗಳ ಗರ್ಭದಲ್ಲಿಯೇ ಬೇರೆ ರಾಜ್ಯಗಳು ಹುಟ್ಟಿ ಬರುವ ಬೀಜಗಳು ಅಡಗಿವೆ! ಇಂಥ ದುಃಸ್ಥಿತಿಗೆ ಯಾರು ಹೊಣೆ?

– ಸು. ಕೌ

★

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ - ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ.

–ಪ್ರಕಾಶಕರು

ಕಾಶ್ಮೀರ ಕಾರ್ಯಾಚರಣೆಯ ಏಕಪಕ್ಷೀಯ ನಿಲುಗಡೆ ಯಶಸ್ವಿಯಾಗಲಿ

-ಸುರೇಂದ್ರ ಕೌಲಗಿ

ಕಾಶ್ಮೀರ ಬಂಡುಕೋರರ ವಿರುದ್ಧ ಸೈನಿಕ ಕಾರ್ಯಾಚರಣೆ ೧೯೮೯ ರಿಂದಲೂ ನಡೆಯುತ್ತಿದೆ. ಅದೊಂದು ಅಘೋಷಿತ, ಅನಧಿಕೃತ ಯುದ್ಧವಾಗಿಯೇ ನಡೆದಿದೆ. ಇದು ವರೆಗೆ ಇಂಥ ಕಾರ್ಯಾಚರಣೆಯಲ್ಲಿ ಸತ್ತ ಭಾರತೀಯ ಸೈನಿಕರ, ಸಾಮಾನ್ಯ ಜನರ ಹಾಗೂ ಬಂಡುಕೋರರ ಸಂಖ್ಯೆ ಲಕ್ಷಗಟ್ಟಳೆ ಆಗಿದೆ. ಕಳೆದ ಒಂದು ವರ್ಷದಲ್ಲಿ, ಗೃಹಮಂತ್ರಿಯವರ ಹೇಳಿಕೆಯ ಪ್ರಕಾರ, ೧೪೯೯ ಬಂಡುಕೋರರು, ೪೦೮ ರಕ್ಷಣಾಪಡೆಯ ಸೈನಿಕರು ಮತ್ತು ೬೯೯ ಜನ ನಾಗರೀಕರು ಹತರಾಗಿದ್ದಾರೆ. ಇಂಥ ಘೋರ ಸ್ವರೂಪದ ಹೋರಾಟ ನಡೆದಿರುವಾಗ ಈಗ ರಂಜಾನ್ ಹಬ್ಬದ ಸಂದರ್ಭದಲ್ಲಿ ಭಾರತ ಸರ್ಕಾರ ಏಕಪಕ್ಷೀಯವಾಗಿ ತನ್ನ ಕಾರ್ಯಾಚರಣೆಯನ್ನು ನಿಲ್ಲಿಸಿದೆ. ಈ ರೀತಿ ಮೊಟ್ಟ ಮೊದಲನೆಯ ಬಾರಿಗೆ ಭಾರತ ಸರ್ಕಾರ ಮಾಡಿದೆ. ಈ ಮೊದಲು ಕಳೆದ ಆಗಸ್ಟ್ ತಿಂಗಳಲ್ಲಿ ಉಗ್ರಗಾಮಿಗಳೇ ಏಕಪಕ್ಷೀಯವಾಗಿ ವಿರಾಮ ಘೋಷಣೆ ಮಾಡಿದ್ದರು. ಆದರೆ ಕಾಶ್ಮೀರ ವಿವಾದದ ಪರಿಹಾರದ ಮಾತುಕತೆಗಳಲ್ಲಿ ಪಾಕಿಸ್ತಾನವನ್ನೂ ಕಡ್ಡಾಯವಾಗಿ ಸೇರಿಸಿಕೊಳ್ಳಬೇಕೆಂಬ ಅವರ ಬೇಡಿಕೆಯನ್ನು ಭಾರತ ನಿರಾಕರಿಸಿದ್ದರಿಂದ ಆ ಕದನ ವಿರಾಮ ಮುಂದುವರಿಯಲಿಲ್ಲ. ಈಗ ಭಾರತವು ರಂಜಾನ್ ಹಬ್ಬದ ನೆಪದಲ್ಲಿ ಕಾರ್ಯಾಚರಣೆಯನ್ನು ನಿಲ್ಲಿಸಿರುವುದು ಒಂದು ಕುತೂಹಲಕಾರಿ ಬೆಳವಣಿಗೆಯಾಗಿದೆ. ಭಾರತದ ಈ ನಿರ್ಧಾರವನ್ನು ಕಾಶ್ಮೀರದಲ್ಲಿ ನೆಲೆ ಹೊಂದಿರುವ ಪಾಕಿಸ್ತಾನದ ಬಂಡುಕೋರರ ಸಂಘಟನೆಯಾದ ಹಿಜ್ಬ್-ಉಲ್-ಮುಜಾಹಿದೀನ್ ಸಂಪೂರ್ಣವಾಗಿ ತಿರಸ್ಕರಿಸಿದೆ. ಅಷ್ಟೇ ಅಲ್ಲ, ರಂಜಾನ್ ಹಬ್ಬದಲ್ಲಿ ಅದು ದಾಳಿ ಮಾಡುವುದಾಗಿಯೂ ಹೇಳಿದೆ. ಆದರೆ ಕಾಶ್ಮೀರದಲ್ಲಿರುವ ಎಲ್ಲ ಪಕ್ಷಗಳ ಹುರಿಯತ್ ಸಂಘಟನೆ ಇದನ್ನು ಒಂದು ಸಕಾರಾತ್ಮಕ ಕ್ರಮವೆಂದು ಕರೆದಿದೆ. ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಈ ಬಂಡುಕೋರರ ಸಂಘಟನೆಗಳಲ್ಲಿ ಕಾರ್ಯಾಚರಣೆಯ ನಿಲುಗಡೆಯ ಬಗ್ಗೆ ವೈಚಾರಿಕ ತುಮುಲ ಪ್ರಾರಂಭವಾಗಿರುವುದು ಒಂದು ಸ್ವಾಗತಾರ್ಹ ಬೆಳವಣಿಗೆ.

ಆದರೆ ಪಾಕಿಸ್ತಾನ ನೆಲೆಯ ಬಂಡುಕೋರರಾಗಲೀ, ಕಾಶ್ಮೀರ ನೆಲೆಯ ಬಂಡುಕೋರರಾಗಲೀ ತಮ್ಮ ಮೂಲಭೂತ ಬೇಡಿಕೆಗಳಿಂದ ಸ್ವಲ್ಪವೂ ಹಿಮ್ಮೆಟ್ಟಿಲ್ಲ. ಅದೇ ರೀತಿ ಭಾರತವು

ತನ್ನ ಮೂಲಭೂತ ನಿಲುವಿನಿಂದ ಸ್ವಲ್ಪವೂ ಹಿಂದೆಗೆದಿಲ್ಲ. ಭಾರತ ಮತ್ತು ಪಾಕಿಸ್ತಾನ ಎರಡೂ ತಮ್ಮ ಕಂಠಪೂರ್ತಿ ಶಸ್ತ್ರಾಸ್ತ್ರಗಳನ್ನು, ಅಣ್ವಸ್ತ್ರಗಳನ್ನು, ಕ್ಷಿಪಣಿಗಳನ್ನು ಹೊಂದಿವೆ. ಮೂರು ಸಲ ಯುದ್ಧವೂ ಆಗಿದೆ. ವಿಶ್ವರಾಷ್ಟ್ರ ಸಂಸ್ಥೆ ಉದಾಸೀನವಾಗಿ ಕುಳಿತಿದೆ. ಬೇರೆ ರಾಷ್ಟ್ರಗಳ ಮಧ್ಯಸ್ಥಿಕೆಯನ್ನು ಭಾರತ ಒಪ್ಪುತ್ತಿಲ್ಲ. ಇಂಥ ಬಿಕ್ಕಟಿನ ಸ್ಥಿತಿಯಲ್ಲಿಯೂ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನ ನಿರಂತರವಾಗಿ ಸಾಗಿದೆ. ಅದರಲ್ಲಿ ಏಳುಬೀಳುಗಳಾಗಿವೆ. ಆದರೂ ಕೂಡ ಅಂಥ ಒಂದು ಸರಣೀ ಪ್ರಯತ್ನವಾಗಿ ಈಗ ಭಾರತ ರಂಜಾನ್ ಶಾಂತಿ ನಿಲುಗಡೆಯ ನಿಲುವನ್ನು ತೆಗೆದುಕೊಂಡಿದೆ.

ಮುಸ್ಲಿಂರಿಗೆ ರಂಜಾನ್ ಒಂದು ಪವಿತ್ರವಾದ ಹಬ್ಬ. ಆ ಹಬ್ಬದ ಸಂದರ್ಭದಲ್ಲಿ ಅವರು ದಾನ-ಧರ್ಮ ಮಾಡುತ್ತಾರೆ. ಮಾನವರೆಲ್ಲರನ್ನು ಪ್ರೀತಿಸುತ್ತಾರೆ. ಆ ಹಬ್ಬದ ಸಂದರ್ಭದಲ್ಲಿಯಾದರೂ ಕಾಶ್ಮೀರ ಕಣಿವೆಯಲ್ಲಿ ಶಾಂತಿ ಇರಲಿ, ತನ್ಮೂಲಕ ಅಲ್ಲಿಯ ಜನಕ್ಕೆ ಶಾಂತಿಯ ನಿಜವಾದ ಮೌಲ್ಯ ಗೊತ್ತಾಗಲಿ ಎಂಬ ಸದಾಶಯವೂ ಈ ತೀರ್ಮಾನದ ಹಿಂದೆ ಇದೆ.

ಈಗ ನಮ್ಮ ಮುಂದೆ ಇರುವ ಪ್ರಶ್ನೆ ಹಿಂಸಾಚಾರವನ್ನು ನಡೆಸದೆ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುವುದು ಹೇಗೆ? ಹಿಂಸೆಗೆ ಪ್ರತಿಯಾಗಿ ಹಿಂಸೆಯಿಂದಾಗಲೀ, ಅವಿಶ್ವಾಸದ ಮಾತುಗಳಿಂದಾಗಲೀ ಈ ಸಮಸ್ಯೆಯನ್ನು ಬಗೆಹರಿಸಲಾಗುವುದಿಲ್ಲವೆಂಬುದು ಕಳೆದ ಐವತ್ತು ವರ್ಷಗಳ ಘಟನಾವಳಿಗಳೇ ಸಾಕ್ಷಿಯಾಗಿ ನಿಂತಿವೆ. ಆದ್ದರಿಂದ ಈಗ ನಮ್ಮ ಮುಂದೆ ಹಿಂಸೆಗೆ ಪರ್ಯಾಯವಾಗಿ ಇರುವ ಮಾರ್ಗವೆಂದರೆ ಅಹಿಂಸಾ ಮಾರ್ಗವೊಂದೇ. ಆ ಅಹಿಂಸಾ ಮಾರ್ಗದಲ್ಲಿ ಮುನ್ನಡೆಯುವ ಪ್ರಯತ್ನವಾಗಿ ರಂಜಾನ್ ಶಾಂತಿ ವಿರಾಮ ಇದೆಯೆಂದು ಭಾವಿಸೋಣವೆ? ಆದಷ್ಟು ಬೇಗ ಕಾಶ್ಮೀರ ನೆಲೆಯಲ್ಲಿಯ ಹುರಿಯತ್ ಸಂಘಟನೆಯ ಪ್ರತಿನಿಧಿಗಳನ್ನು ವಾಜಪೇಯಿಯವರು ಆಹ್ವಾನಿಸಿ ರಂಜಾನ್ ಹಬ್ಬದ ಶುಭಾಶಯಗಳನ್ನು ಕೋರುವುದರ ಜೊತೆಗೆ ಅವರನ್ನು ಪೂರ್ತ ವಿಶ್ವಾಸಕ್ಕೆ ತೆಗೆದುಕೊಂಡು ಸಂಧಾನದತ್ತ ಒಂದು ಪುಟ್ಟ ಹೆಜ್ಜೆಯನ್ನಾದರೂ ಇಡಲು ಪ್ರಯತ್ನಿಸಬೇಕು. ಹುರಿಯತ್ ಸಂಘಟನೆ ಭಾರತದತ್ತ ಒಲವು ತೋರಿಸಿದರೆ ಹಿಜ-ಉಲ್-ಮುಜಾಹೀನ್ ಸಂಘಟನೆ ಕಾಶ್ಮೀರದಲ್ಲಿಯ ತನ್ನ ಪ್ರಭಾವಗಳನ್ನು ಕಳೆದುಕೊಳ್ಳುತ್ತದೆ. ಇಂಥ ಒಂದು ಪ್ರೇರಣೆ ವಾಜಪೇಯಿಯವರಿಗೆ ಬರಲೆಂದು ಹಾರೈಸೋಣ. ★

ಜೀವನ್ಮುಕ್ತ ಶ್ರೇಯಾರ್ಥಿ ಕಿಶೋರಲಾಲ್ ಮಶ್ರೂವಾಲಾ

– ವಿನೋಬಾ

(ಕಿಶೋರಲಾಲ್ ಮಶ್ರೂವಾಲಾ ಅವರು ಗಾಂಧೀ ಬಳಗದಲ್ಲಿದ್ದವರು. ಗಾಂಧೀಜಿಯವರು ಪ್ರಕಟಿಸುತ್ತಿದ್ದ "ಹರಿಜನ" ವಾರಪತ್ರಿಕೆಯ ಸಂಪಾದಕರೂ ಆಗಿದ್ದರು. ಅವರನ್ನು ಕುರಿತು ಆಚಾರ್ಯ ವಿನೋಬಾರವರು ಬಹಳ ಮಾರ್ಮಿಕವಾಗಿ ಇಲ್ಲಿ ಪರಿಚಯಿಸಿದ್ದಾರೆ. –ಸಂ)

ಮಹಾತ್ಮರ ಆಶ್ರಮ - ಸಂಸ್ಥೆಗಳು ದೇಶಕ್ಕೆ ಕೊಟ್ಟಿರುವ ಕೆಲವೇ ಕೆಲವು ಅಮೂಲ್ಯವಾದ ರತ್ನಗಳಲ್ಲಿ ಕಿಶೋರಲಾಲ್‌ಭಾಯಿ ಒಬ್ಬರು.

ಜನ್ಮತ: ಅಲೌಕಿಕವಾದ ಶಕ್ತಿಯನ್ನು ತೆಗೆದುಕೊಂಡು ಬರುವಂಥವರು ಬಹಳ ಕಡಿಮೆ. ಹೆಚ್ಚಾಗಿ ಅನೇಕರು ತಮ್ಮ ಪ್ರಯತ್ನದಿಂದಲೇ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುತ್ತಾರೆ. ಕಿಶೋರಲಾಲ್‌ಭಾಯಿ ಜನ್ಮತಃ ತಮ್ಮೊಂದಿಗೆ ಕುಶಾಗ್ರಬುದ್ಧಿಯನ್ನು ಖಂಡಿತ ತೆಗೆದುಕೊಂಡು ಬಂದಿದ್ದರಾದರೂ ಅವರು ಸಂಪಾದಿಸಿದ ಯೋಗ್ಯತೆ ಅವರ ಸಾಧನೆಯ ಫಲವಾಗಿತ್ತು. **ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿ ಸಿದ್ಧಯೆ** ಎಂಬುದು ನಿಜವಾದರೂ ಬಹಳ ಕಡಿಮೆ ಜನರು ನಿಜವಾದ ಶ್ರೇಯಾರ್ಥಿಗಳಾಗಿರುತ್ತಾರೆ. ಶ್ರೇಯಾರ್ಥಿಗಳಲ್ಲಿಯೂ ಕೂಡ ಬಹಳ ಜನರ ಇಚ್ಛೆ ಮಂದವಾಗಿರುತ್ತದೆ. ಆದರೆ ಇನ್ನೂ ಕೆಲವರಲ್ಲಿ ಶ್ರೇಯ ಸಂಪಾದನೆಯ ಇಚ್ಛೆ ಬಹಳ ತೀವ್ರವಾಗಿರುತ್ತದೆ. ಅದರ ಬಲದಿಂದ ಅವರು ಸಫಲರಾಗಿಯೇ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ. ಕಿಶೋರಲಾಲಭಾಯಿ ಇಂಥ ತೀವ್ರ ಮೋಕ್ಷಾರ್ಥಿಗಳಾಗಿದ್ದರು. ವಿಕಾರಂಗಳೇ ಬರದಷ್ಟು ಚಿತ್ತಶುದ್ಧಿಯನ್ನು ಅವರು ಮಾಡಿಕೊಂಡಿದ್ದರು. ಎಲ್ಲ ಪ್ರಕಾರದ ವ್ಯಕ್ತಿಗಳ ಬಗ್ಗೆ ಎಲ್ಲ ಪರಿಸ್ಥಿತಿಯಲ್ಲಿ ಅವರದು ಸಮಭಾವ ಮತ್ತು ಪ್ರೇಮ ಇದ್ದಿರುತ್ತಿತ್ತು.

ಶತಮಾನಗಳಿಂದ ಸಂತರು ತಪಸ್ಸು, ಚಿಂತನೆ ಮತ್ತು ಅನುಭವ ಹಾಗೂ ಪುರಾತನ ಜ್ಞಾನವನ್ನು ಆತ್ಮಸತ್ ಮಾಡಿಕೊಂಡು ಜನತೆಗೆ ಮಾರ್ಗದರ್ಶನ ಮಾಡಿದ್ದಾರೆ ಮತ್ತು ಆ ಮಾರ್ಗದರ್ಶನ ದೀರ್ಘಕಾಲದವರೆಗೆ ಉಪಯುಕ್ತವೆಂದು ಸಿದ್ಧವಾಗಿದೆ. ಕಿಶೋರಲಾಲಭಾಯಿ ಇಂಥ ಸಂತರ ಸಾಲಿನಲ್ಲಿ ಕುಳಿತುಕೊಳ್ಳಲು ಯೋಗ್ಯರಾಗಿದ್ದಾರೆ. ಅವರ ವ್ಯಕ್ತಿತ್ವವನ್ನು ಸರಿಯಾಗಿ ಅರಿತುಕೊಳ್ಳಲು ಅವರು ಬರೆದಿರುವ ಗ್ರಂಥಗಳ ಅಧ್ಯಯನ ಅವಶ್ಯ. ಕೇವಲ ಬುದ್ಧಿಯ ಬಲದಿಂದಲೇ ಪ್ರಭಾವೋತ್ಪಾದಕವಾದ ಗ್ರಂಥವನ್ನು ಬರೆಯಬಹುದಾಗಿದೆ, ಆದರೆ ಅವರ ಗ್ರಂಥಗಳ ವಿಶೇಷತೆ ಏನೆಂದರೆ ಅವರು ಸ್ವತಃ ತಪಸ್ಸು ಮಾಡಿ,

ಚಿಂತನ ಮನನ ಮಾಡಿ ಮತ್ತು ಆಚರಣೆಯನ್ನೂ ಮಾಡಿ ಏನನ್ನು ಪಡೆದರೂ ಆ ಅನುಭವದ ಆಧಾರದ ಮೇಲೆ ಅವರು ಆ ಗ್ರಂಥಗಳ ರಚನೆ ಮಾಡಿದ್ದಾರೆ. ಆದ್ದರಿಂದಲೇ ಅದು ನಮಗೆ ಹೆಚ್ಚು ಉಪಯೋಗಕರವಾಗಿದೆ.

ಆಶ್ರಮದಲ್ಲಿ ಇರುತ್ತಲೇ ಕಿಶೋರಲಾಲಭಾಯಿ ಅನೇಕ ಪ್ರಕಾರದ ಸತತ ದೀರ್ಘ ಸಾಧನೆ ಮಾಡಿದರು. ಅವುಗಳಲ್ಲಿಯ ಒಂದನ್ನು ಅವರು ಸ್ವತಃ ನನಗೆ ಹೇಳಿದ್ದರು. ಅವರು ಹೇಳಿಕೆ ಏನೆಂದರೆ, "ಮನುಷ್ಯನು ಪ್ರಯತ್ನ ಮಾಡಿ ಯಾವುದಾದರೊಂದು ಸದ್ಗುಣವನ್ನು ಯಥಾಶಕ್ತಿ ವಿಕಾಸಗೊಳಿಸಿಕೊಳ್ಳಬೇಕು. ಏಕೆಂದರೆ ಅದರ ಮೂಲಕ ಜನರ ಸೇವೆಯನ್ನು ಮಾಡಬಹುದು. ಒಂದು ಸದ್ಗುಣದ ವಿಕಾಸವಾದ ಮೇಲೆ ಬೇರೆ ಸದ್ಗುಣಗಳು ತಾವೇ ಬಂದು ಸೇರುತ್ತವೆ". ಅವರು ತಮ್ಮ ಸ್ವಂತ ವಿಕಾಸದಲ್ಲಿ, ಅವರ ಮಾತಿನಲ್ಲಿಯೇ ಹೇಳುವುದಾದರೆ, 'ಕರುಣೆ'ಗೆ ವಿಶೇಷ ಸ್ಥಾನವನ್ನು ಕೊಟ್ಟಿದ್ದರು. ಅವರ ಜೀವನದಲ್ಲಿ 'ದುಃಖ ಇರುವೆಡೆ ಸಂತ' ಎಂಬುದು ಪ್ರತ್ಯಕ್ಷವಾಗಿ ಚರಿತಾರ್ಥವಾಗುವುದನ್ನು ನಾನು ನೋಡಿದ್ದೆ. ಸ್ವತಃ ಕಾಯಿಲೆಯುಳ್ಳವರೂ, ಬಹಳ ನಿಃಶಕ್ತರೂ ಆಗಿದ್ದರೂ ಕೂಡ ಬೇರೆ ಯಾರೊಬ್ಬರ ದುಃಖವನ್ನು ಕೇಳುತ್ತಲೇ ಅದನ್ನು ದೂರಮಾಡಲು ಯಥಾಶಕ್ತಿ ಪ್ರಯತ್ನಮಾಡದೇ ಇರುತ್ತಿರಲಿಲ್ಲ.

ಕಿಶೋರಲಾಲಭಾಯಿಯವರ ಕಾರ್ಯ ಮತ್ತು ಹೃದಯ ಎರಡೂ ಮಹಾನ್ ಆಗಿದ್ದವು. ಆದರೂ ಕೂಡ ಅವರ ಹೃದಯ ಮಹಾನ್ ಎಂದು ಕರೆಯುತ್ತೇನೆ. ಅವರು ತಮ್ಮ ಅಂತಃಕರಣವನ್ನು ಪರಿಶುದ್ಧವಾಗಿಯೂ, ನಿರ್ಮಲ ನಿಷ್ಕಪಟ ಮಗುವಿನಂತೆಯೂ ಮಾಡಿಕೊಳ್ಳುವಲ್ಲಿ ಅವರ ಪೂರ್ವಜನ್ಮದ ಸಂಸ್ಕಾರಗಳಿದ್ದಿರಬಹುದಾದರೂ ಈ ಜನ್ಮದಲ್ಲಿಯ ಪುರುಷಾರ್ಥದ ಪ್ರಮಾಣ ಹೆಚ್ಚಾಗಿಯೇ ಇತ್ತು. ಅವರು ನಿರಂತರವಾಗಿ ತಮ್ಮ ದೋಷಗಳ ಪ್ರಕ್ಷಾಲನ ಮಾಡಿಕೊಳ್ಳುತ್ತಲೇ ಇರುತ್ತಿದ್ದರು, ಯಾರಾದರೂ ಅವರನ್ನು ಒಂದು ವರ್ಷದ ತರುವಾಯ ನೋಡಿದರೆ ಅವರಲ್ಲಿ ಬಹಳಷ್ಟು ಬದಲಾವಣೆಯನ್ನು ಕಾಣಬಹುದಾಗಿತ್ತು. ಅವರು ಯಾವಾಗಲೂ ವೇಗವಾಗಿ ಪ್ರಗತಿ ಸಾಧಿಸುತ್ತಿದ್ದರು. ಯಾವ ಪ್ರಕಾರವಾಗಿ ಕಲ್ಲುಸಕ್ಕರೆಯನ್ನು ಬಾಯಿಯೊಳಗೆ ಹಾಕಿಕೊಳ್ಳುತ್ತಲೇ ಅದರ ಚೂರುಗಳ ಬಗ್ಗೆ ಜ್ಞಾನ ಮತ್ತು ಪ್ರೇಮ ಹುಟ್ಟುತ್ತವೋ ಅದೇ ಪ್ರಕಾರವಾಗಿ ಕಿಶೋರಲಾಲಭಾಯಿಯವರನ್ನು ಪರಿಚಯಮಾಡಿಕೊಂಡ ಕೂಡಲೆ ಅವರ ಬಗ್ಗೆ ಶ್ರದ್ಧೆ ಮತ್ತು ಪ್ರೇಮ ಎರಡೂ ಹುಟ್ಟುತ್ತಿದ್ದವು. 'ಸಂತ ಪರಮ ಹಿತಕಾರಿ' ಎಂಬ ಒಂದು ಭಜನೆ ಅವರಿಗೆ ಪ್ರಿಯವಾಗಿತ್ತು. ಆ ಭಜನೆಯ ಕೊನೆ ಸಾಲು 'ತ್ರಿಗುಣಾ

ಶೀತವಾಗಿ ಅಲೆಯುತ್ತಿದೆ ತನ ತ್ಯಾಗಿ' ಎಂಬುದು ಕಿಶೋರಲಾಲಭಾಯಿಯವರ ಜೀವನಕ್ಕೆ ಸರಿಯಾಗಿ ಅನ್ವಯಿಸುತ್ತದೆ.

ನಾವು ಸೃಷ್ಟಿಯಲ್ಲಿ ಅನೇಕ ಬಾರಿ ಅನೇಕ ಚಮತ್ಕಾರಗಳನ್ನು ನೋಡುತ್ತೇವೆ. ಕೆಲವೊಮ್ಮೆ ಆಕಾಶದಲ್ಲಿ ಮೋಡ ಮುಸುಕುತ್ತದೆ, ಮಿಂಚು ಪ್ರಾರಂಭವಾಗುತ್ತದೆ, ಏಕಪ್ರಕಾರವಾಗಿ ಮಳೆಸುರಿಯಲಾರಂಭಿಸುತ್ತದೆ ಮತ್ತು ಕ್ಷಣಾರ್ಧದಲ್ಲಿ ಆಕಾಶ ಸ್ವಚ್ಛವಾಗಿ ಬಿಡುತ್ತದೆ. ಆ ಹಿಂದಿನ ಮೋಡ, ಆ ಮಿಂಚು, ಆ ಮಳೆ ಎಲ್ಲವೂ ಒಂದು ಕನಸೇನೋ ಎಂಬಂತೆ ಸ್ವಚ್ಛ ನಿರಭ್ರ ಶಾಂತ ಸೃಷ್ಟಿ ಕಂಡುಬರುತ್ತದೆ. ಇಷ್ಟು ನಿರ್ಲಿಪ್ತ ವೃತ್ತಿಯ ದರ್ಶನ ನಮಗೆ ಆಗುತ್ತದೆ. ಆದರೆ ಅಂಥದೇ ನಿರ್ಲಿಪ್ತತೆಯನ್ನು ನಾವು ದೇಹಧಾರಣೆಯ ಸ್ಥಿತಿಯಲ್ಲಿ ಕಂಡಾಗ ಅದು ಚಮತ್ಕಾರವಲ್ಲದೆ ಮತ್ತೇನು?

ಕಿಶೋರಲಾಲ್‌ಭಾಯಿಯರ ದಿನನಿತ್ಯದ ಮಹಾಯುದ್ಧದ ಕಡೆಗೆ ನೋಡಿದಾಗ ನನಗೆ ಮಾನವೀಯ ನಿರ್ಲಿಪ್ತತೆಯ ಒಂದು ಅದ್ವಿತೀಯ ದರ್ಶನ ನೋಡಲು ಸಿಗುತ್ತದೆ. ಇದು ೨೫ ವರ್ಷಗಳಿಂದ ಸತತವಾಗಿ ನಡೆದಂಥದು. ಅವರಿಗೆ ಅನೇಕ ಬಾರಿ ಉಬ್ಬಸ ಬರುತ್ತಿತ್ತು. ಜನರಿಗೆ ಅದರಿಂದ ಭಯವಾಗುತ್ತಿತ್ತು. ಆದರೆ ಕಿಶೋರಲಾಲಭಾಯಿ ಇಡೀ ರಾತ್ರಿಗಳನ್ನು ಆ ರೋಗದೊಂದಿಗೆ ಜಗಳವಾಡುವುದರಲ್ಲಿ ಕಳೆಯುತ್ತಿದ್ದರು. ಅವರ ಆ ತೀವ್ರ ವೇದನೆಯ ದೃಶ್ಯವನ್ನು ಬಿರುಗಾಳಿಗಲ್ಲದೆ ಬೇರೆಯದಕ್ಕೆ ಹೋಲಿಸಲಾರೆ, ಆ ಬಿರುಗಾಳಿ ಹೋದ ಕ್ಷಣದಿಂದ ಅತ್ಯಂತ ಕ್ಷೀಣತೆ ಮತ್ತು ಶಕ್ತಿಹೀನತೆಯ ನಂತರವೂ ಅವರ ಮುಖದ ಮೇಲೆ ಮಗುವಿನಂಥ ನಿರ್ದೋಷ ಹಾಸ್ಯದ ಸುಳಿ ಕಾಣುತಿತ್ತು. ಅವರು ಶರೀರವನ್ನು ತಮ್ಮಿಂದ ಬೇರೆಯೆಂದೇ ತಿಳಿದಿದ್ದರು. ಆತ್ಮ-ಅನಾತ್ಮದ ಭೇದವನ್ನು ಅವರು ಬಹಳ ಸ್ಪಷ್ಟವಾಗಿ ಅನುಭವಿಸುತ್ತಿದ್ದುದರಿಂದ ಏಕಪ್ರಕಾರವಾದ ಶಾರೀರಿಕ ವ್ಯಥೆ ತೀವ್ರವಾಗಿದ್ದರೂ ಅವರ ಮನಸ್ಸಿನಲ್ಲಿ ಪ್ರಸನ್ನತೆ ಶಾಶ್ವತವಾಗಿ ಇರುತ್ತಿತ್ತು. ಇಷ್ಟೊಂದು ದೀರ್ಘ ಘೋರ ಕಾಯಿಲೆಯಲ್ಲಿ ಕೂಡ ಅವರು ತಮ್ಮ ಮನಸ್ಸನ್ನು ಸಂತುಲಿತವಾಗಿ ಇಟ್ಟುಕೊಂಡಿದ್ದರು. ಕಿಶೋರಲಾಲಭಾಯಿಯವರಲ್ಲಿ ಕಂಡಂಥ ನಿರ್ಲಿಪ್ತ ವೃತ್ತಿಯನ್ನು ಬಹುಶಃ ನಾನು ಬೇರೆ ಎಲ್ಲಿಯೂ ಕಾಣಲಿಲ್ಲ. ಮನುಷ್ಯ ದೇಹದಲ್ಲಿ ಬಂದುದಕ್ಕಾಗಿ ಪಡೆಯಬಹುದಾದ ವಸ್ತು ಇದೇ.

ಒಂದು ಹಳೆಯ ಮಾತು. ಸುಪ್ರಸಿದ್ಧ ಶ್ಲೋಕವಿದೆ. ತದ್

೨೭ ನೇ ಪುಟ ನೋಡಿ

ಶಿಕ್ಷಣ ವಿಚಾರಧಾರೆ...........

ಹಿಂದಿನ ಶೈಕ್ಷಣಿಕ ಪ್ರಯೋಗಗಳ ವಿಫಲತೆ

– ಆಚಾರ್ಯ ಕೃಪಲಾನಿ

(ಶಿಕ್ಷಣ ಕ್ಷೇತ್ರ ಎಂದಿನಿಂದಲೂ ವಿಮರ್ಶೆಗೆ ಒಳಗಾಗುತ್ತ ಬಂದಿರುವಂಥದು. ಶಿಕ್ಷಣವು ಅನ್ನ ಕಾಯಕದ ಸುತ್ತ ಇರಬೇಕೆಂಬ ಗಾಂಧೀಜಿಯವರ ವಿಚಾರದ ಬೆಳವಣಿಗೆಯನ್ನು ಕೃಪಲಾನಿ ಯವರು ಇಲ್ಲಿ ದಾಖಲಿಸಿದ್ದಾರೆ. ಗುರಿ ಮತ್ತು ಗುರು ಇಲ್ಲದ ಇಂದಿನ ಶಿಕ್ಷಣ ಪದ್ಧತಿಯ ವಿರುದ್ಧವಾಗಿ ಅನ್ನಕಾಯಕದ ಶಿಕ್ಷಣವು ಇಂದಿಗೂ ಪ್ರಸ್ತುತವಾಗಿದೆಯೆಂಬುದು ೬೨ ವರ್ಷಗಳ ಹಿಂದೆ ೧೯೩೮ ರಲ್ಲಿ ಗಾಂಧೀಜಿ ಹೇಳಿದ್ದರೆಂಬುದು ಆ ವಿಚಾರದ ಆಕರ್ಷಣೆ. ಇಲ್ಲಿ ಆ ವಿಚಾರ ಗಳನ್ನು ಕ್ರಮಶಃ ಕೊಡಲಾಗುತ್ತಿದೆ. ಇದು ಆರನೇಯ ಕಂತು. ಸಂ.)

ಈ ಕ್ಷೇತ್ರದಲ್ಲಿ ಇಷ್ಟು ಜನ ಸುಧಾರಕರೂ ವಿಚಾರಿಗಳೂ ಆಗಿಹೋದರೂ ಅತ್ಯಗತ್ಯವಾದ ಈ ಶಿಕ್ಷಣ ಸುಧಾರಣೆಯನ್ನೇಕೆ ಒಪ್ಪಿಯೂ ಇಲ್ಲ, ಮಾಡಿಯೂ ಇಲ್ಲ? ಹೊಸ ಪದ್ಧತಿಯಂತೆ ಪ್ರಯೋಗ ಮಾಡಲು ಹುಟ್ಟಿದ ಸಂಸ್ಥೆಗಳೇಕೆ ಅಲ್ಪಾಯುಗಳಾದವು? ಹೊಸದೆನಿಸಿದರೂ ಎಲ್ಲಕ್ಕಿಂತ ಹಳೆಯದೂ ಎಲ್ಲಕ್ಕಿಂತ ಸ್ವಾಭಾವಿಕವೂ ಆದ ಈ ಶಿಕ್ಷಣ ಪದ್ಧತಿ ಯೂರೋಪನ್ನು ಎಂದೋ ಗೆಲ್ಲು ತ್ತಿತ್ತು– ಔದ್ಯೋಗಿಕ ಕ್ರಾಂತಿಯೊಂದು ಆಗದಿದ್ದಿದ್ದರೆ. ಈ ಕ್ರಾಂತಿ ಗ್ರಾಮೋ ದ್ಯೋಗಗಳನ್ನು ಪೂರಾ ನಾಶ ಮಾಡಿತು. ಹಳ್ಳಿಗಳ ಚಿಕ್ಕ ಚಿಕ್ಕ ಗ್ರಾಮೋ ದ್ಯೋಗ ಬೇಸಾಯಗಳ ಆರ್ಥಿಕ ರಚನೆಯನ್ನು ಹಾಳು ಮಾಡಿ ಜೀವನದ, ಗ್ರಾಮ ಸಂಸ್ಕೃತಿಯ ಅಧಿಷ್ಠಾನವನ್ನು ಗಿರಣಿಗಾರಿಕೆಯ ಪಟ್ಟಣಗಳಿಗೆ ತಂದಿ ಟ್ಟಿತು. ನಿಪುಣರಾದ ಕೆಲಸಗಾರರ, ಕಸಬುದಾರರ ಅಗತ್ಯವಿಲ್ಲದಾಯಿತು. ಗಿರಣಿ, ಕಾರಖಾನೆಗಳಿಗೆ ಬೇಕಾದುದು ನೈಪುಣ್ಯವಿಲ್ಲದ ಯಾಂತ್ರಿಕ ಕೆಲಸ.

ಹೀಗೆ ಬರೀ ಬೆವರು ಸುರಿಸುವ ಕಾರಖಾನೆಯ ದುಡಿತಗಾರನಿಗೆ ಶಿಕ್ಷಣಕ್ಕೆ ಅವಕಾಶವೆಲ್ಲಿ? ಮೊದಮೊದಲು ಕಾರಖಾನೆ ಕೂಲಿಯೆಂದರೆ ಕಠೋರ, ದಯಾ ಹೀನ ಬದುಕಾಗಿತ್ತು. ಅದಕ್ಕೆ ಶಿಕ್ಷಣವನ್ನು ಜೋಡಿಸಿದ್ದರೆ ಬರೀ ಅಣಕ, ಅವಮಾನ ಆಗುತ್ತಿತ್ತು. ಆದುದರಿಂದ ಹಾಗೆ ಮಾಡುವ ಪ್ರಯತ್ನ ನಡೆಯು ಲಿಲ್ಲ. ಕೈ ಕಸುಬಿನ ಕಾಲದಲ್ಲಿ ಮಗು ಮನೆಯವರ ಕೆಲಸದಲ್ಲಿ, ದುಡಿತದಲ್ಲಿ ಭಾಗವಹಿಸಿ ಅದರಿಂದ ಎಷ್ಟೋ ಬೌದ್ಧಿಕ ಪೋಷಣೆಯನ್ನು ಪಡೆಯುತ್ತಿತ್ತು. ನೈಸರ್ಗಿಕ ವಾತಾವರಣದಲ್ಲಿ ಬದುಕಿ ಬಾಳಿ ಅದರಿಂದ ತಮ್ಮ ಸ್ವಾಭಾವಿಕ ಜ್ಞಾನವನ್ನೂ ಬಹುಮಟ್ಟಿನ ಶಿಕ್ಷಣವನ್ನೂ ಪಡೆಯುತ್ತಿದ್ದ ಜನರಿಗೆ – ಗಂಡಸರಿಗೆ ಹೆಂಗಸರಿಗೆ–ಈ ಗಿರಣಿ ಕಾರಖಾನೆಗಳ ವ್ಯವಸ್ಥೆ, ಪಟ್ಟಣದ ಬದುಕು ಲಾಭ ವಿಲ್ಲದಂತೆ ಮಾಡಿತು.

ಹೀಗೆ ಔದ್ಯೋಗಿಕ ಕ್ರಾಂತಿಯ ಪರಿಣಾಮ ಶಿಕ್ಷಣ ಕ್ಷೇತ್ರದಲ್ಲಿ ಪ್ರತಿಗಾಮಿಯಾಯಿತು. ಪಟ್ಟಣವಾಸಿಗಳಾದ ಶ್ರೀಮಂತರಿಗೆ ತೋರಿಕೆಯ ವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಕೃತಕ ಸೌಲಭ್ಯಗಳನ್ನು ಇದು ಕಲ್ಪಿಸಿಕೊಟ್ಟಿತು. ಹಳ್ಳಿಯ ಜನರಿಗೆ, ಪಟ್ಟಣದ ಕೂಲಿ-ಬಾಳಗಳ ಸಾಮಾನ್ಯ ಕೂಲಿಗಾರರಿಗೆ ಇದ್ದ ಅನುಕೂಲಗಳನ್ನು ಕಡಿಮೆ ಮಾಡಿತು. ಇದರಿಂದ ಐಶ್ವರ್ಯದಲ್ಲಿ ಮಾತ್ರವಲ್ಲದೆ, ಶಿಕ್ಷಣ ಸಂಸ್ಕೃತಿ ವಿವೇಕಗಳಲ್ಲೂ ಪಟ್ಟಣವಾಸಿಗಳಾದ ಮೇಲಿನ ಶ್ರೀಮಂತವರ್ಗಕ್ಕೂ ಉಳಿದ ಹಳ್ಳಿ ಪಟ್ಟಣ ಎರಡರ ಜನತೆಗೂ ಅಪಾರ, ವಿಶಾಲ ಅಂತರ ಮೊದಲಾಯಿತು. ಔದ್ಯೋಗಿಕ ಕ್ರಾಂತಿಗೆ ಮೊದಲು ಶಿಕ್ಷಣ ಸಂಸ್ಕೃತಿಗಳ ಗುತ್ತಿಗೆ ಶ್ರೀಮಂತರಿಗೆ ಇರಲಿಲ್ಲ. ಪುರೋಹಿತ ವರ್ಗದವರೂ ಮಧ್ಯಮ ವರ್ಗದವರೂ ವಿದ್ಯಾವಂತರೂ ಶ್ರೇಷ್ಠರೂ ಆಗಿದ್ದರು. ಈ ಕುಲೀನ ವರ್ಗ ಭೂಮಿಯಲ್ಲೇ ಹುಟ್ಟಿ ಬೆಳೆದು ಸದಾ ಜನತೆಯ ಸಂಪರ್ಕದಲ್ಲಿ ಬದುಕಿ ಬಾಳುತ್ತಿತ್ತು. ಈ ರೀತಿಯಲ್ಲಿಯೇ ಪ್ರಾಚೀನ ಕಾಲದಲ್ಲಿ ಮಧ್ಯಯುಗದಲ್ಲಿ ಜನಸಾಮಾನ್ಯರಿಗೆ ಶಿಕ್ಷಣ ಹರಿದು ಬರುತ್ತಿದ್ದುದು. ಪಟ್ಟಣದ ಶ್ರೀಮಂತರಿಗೆ ಮಾತ್ರ ಲಭ್ಯವಾದ ಈ ಹೊಸ ವಿದ್ಯಾಭ್ಯಾಸ ಮೇಲಿನ ವರ್ಗಕ್ಕೂ ಕೆಳಗಿನ ಜನತೆಗೂ ಇದ್ದ ಈ ಸಂಬಂಧವನ್ನು ಕತ್ತರಿಸಿಹಾಕಿತು. ಜನತೆಗೆ ಮೊದಲೇ ಬಡತನ; ಈಗ ಅದಕ್ಕೆ ನೈತಿಕ ಹಾಗೂ ಪ್ರಾಪಂಚಿಕ ಅಜ್ಞಾನ ಹೊಲಸು ಜೊತೆಯಾದವು, ಇದರ ಪರಿಣಾಮವಾಗಿ, ತಮ್ಮ ಅಸಂಖ್ಯ ಸಮಸ್ಯೆಗಳಿಂದ ರಾಷ್ಟ್ರೀಯ ಅಂತರರಾಷ್ಟ್ರೀಯ ಶಾಂತಿಯನ್ನು ಅಲ್ಲಾಡಿಸಿ ನಡುಗಿಸುತ್ತಿರುವ ಹಳ್ಳಿ ಪಟ್ಟಣಗಳ ದೀನ ಹೀನ ಶ್ರಮಜೀವಿಗಳು ಹುಟ್ಟಿದರು.

ಕುಶಲಕಲೆ ಕೈಕಸಬುಗಳು ಇಳಿಮುಖವಾಗಿ, ಅದರಲ್ಲಿ ಹುಟ್ಟುವಳಿಯಾದ ವಸ್ತುಗಳಿಗೆ ಬೆಲೆಯಿಲ್ಲವಾದಾಗ, ಶಿಕ್ಷಣದಲ್ಲಿ ಕೈಕಸಬನ್ನು ಸೇರಿಸಿದ್ದರೆ ಶಿಕ್ಷಣ ಬಹಳ ತುಟ್ಟಿಯಾಗುತ್ತಿತ್ತು. ಆ ಕಾಲದಲ್ಲಂತೂ ಸರಕಾರಕ್ಕೆ ಶಿಕ್ಷಣದ ಗೊಡವೆಯೇ ಇರಲಿಲ್ಲ, ಮುಂದೆ ಈ ಕಾಲದ ಸರಕಾರಗಳು ಈ ಹೊಸ ಪದ್ಧತಿಯನ್ನು ಒಪ್ಪಬಹುದಾಗಿತ್ತು. ಇದು ಕೇವಲ ಒಂದೆರಡು ಶಾಲೆ–ಸಂಸ್ಥೆಗಳ ಮಾತಲ್ಲ, ಸಾರ್ವತ್ರಿಕ ಉಚಿತ ಶಿಕ್ಷಣವನ್ನೊದಗಿಸುವ ಪ್ರಶ್ನೆ. ಆದರೂ ಇಂಥ ಮೂಲಭೂತ ರಾಷ್ಟ್ರ ನಿರ್ಮಾಣ ಕಾರ್ಯದ ವೆಚ್ಚವನ್ನು ಸರಕಾರ ಭರಿಸಲು ಯತ್ನಿಸಬಹುದಾಗಿತ್ತು. ಇವರ ರಾಜಕೀಯ ಆರ್ಥಿಕ ಪ್ರಾದೇಶಿಕ ಸ್ಪರ್ಧೆಗಳ ಫಲವಾಗಿ ದಿನೇ ದಿನೇ ಹೆಚ್ಚುತ್ತಿದ್ದ ಸಮರ ಸನ್ನಾಹವೇ ಇದ್ದ ಹಣವನೆಲ್ಲ ನುಂಗಿ ಹಾಕುತ್ತಿತ್ತು, ದುಭರವಾದ ಈ ವೆಚ್ಚದ ಮಾತಿರಲಿ: ಆರ್ಥಿಕ ಪ್ರಯೋಜನ ಲವಲೇಶವೂ ಇಲ್ಲದಂಥ ಕೈಗಾರಿಕೆಯನ್ನು ಶಿಕ್ಷಣದಲ್ಲಿ ಜೋಡಿಸಿ

ದ್ದರೆ ಅದ ಅಸ್ವಾಭಾವಿಕ, ಕೃತಕ ಆಗುತ್ತಿತ್ತು. ಆ ಕೈಗಾರಿಕೆಯನ್ನು ಶ್ರದ್ಧೆ ಉತ್ಸಾಹಗಳಿಂದ ಕಲಿಯುತ್ತಲೂ ಇರಲಿಲ್ಲ. ನಿಷ್ಪ್ರಯೋಜಕವಾದ ಕೈಗಾರಿಕೆಯನ್ನು ಯಾಂತ್ರಿಕವಾಗಿ ಕಲಿಸಿದ್ದರೆ ಅದು ಸಮವಾಯ ಶಿಕ್ಷಣವಾಗುತ್ತಿರಲಿಲ್ಲ. ವಿದ್ಯಾರ್ಥಿಯ ಸುಪ್ತಶಕ್ತಿಗಳನ್ನು ಹೊರಸೆಳೆಯಲು ಅದಕ್ಕೆ ಸಾಧ್ಯವಿರುತ್ತಿರಲಿಲ್ಲ. ಆದುದರಿಂದ ಶಿಕ್ಷಣ ಸುಧಾರಕರು ಪ್ರತಿಪಾದಿಸಿದುದು ಕೈಗೂಡದ ಕನಸಾಗಿಯೇ ಉಳಿಯಿತು.

ಈ ಕಾರಣದಿಂದ ಶಿಕ್ಷಣದಲ್ಲಿ ಸುಧಾರಣೆಯನ್ನು ಮಾಡಲಾಗಲಿಲ್ಲ. ಇನ್ನೊಂದು ಪ್ರಬಲ ಕಾರಣ, ಹೊಸ ಸಮಾಜದಲ್ಲಿ ರಾಜಕಾರಣಿಗಳಿಗೆ ದೊರೆತ ಸ್ಥಾನ ಪ್ರಜಾತಂತ್ರದ ಪ್ರಗತಿಯಾದಂತೆ ರಾಜಕೀಯ ಕೇವಲ ಭಾಗ್ಯವಂತರ ಸರ್ವಮಾನ್ಯವಾಗಿ ಉಳಿಯಲಿಲ್ಲ. ಮಧ್ಯಮವರ್ಗದವರು ಕ್ರಮೇಣ ಮುನ್ನುಗ್ಗಿ ಬಂದು ಸಾರ್ವಜನಿಕ ಜೀವನದಲ್ಲಿ ಭಾಗವಹಿಸತೊಡಗಿದರು. ಹೊಸ ರಾಜಕಾರಣಿಗಳ ಬಲ ಜನ್ಮದಿಂದ ಕುಲದಿಂದ ಬಂದುದಲ್ಲ, ಮತದಾರರ ಬೆಂಬಲದಿಂದ ಬಂದುದು. ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಅವರು ತಮ್ಮ ಚುನಾವಣಾ ಕ್ಷೇತ್ರಗಳನ್ನು ಕೃಷಿ ಮಾಡಬೇಕಾಯಿತು. ಈ ಕೆಲಸದಲ್ಲಿ ಗೆಲುವನ್ನು ಪಡೆಯಲು ಮಾತಿನ ಚಾತುರ್ಯ, ಅದಕ್ಕಾಗಿ ತರಬೇತು ಅಗತ್ಯವಾಯಿತು. ಜನತೆಯನ್ನು ಒಲಿಸಲು ರಾಜಕಾರಣಿ ಅನೇಕ ವೇಳೆ ಅಧಮವಾದುದನ್ನು ಉತ್ತಮವಾಗಿ, ಉತ್ತಮವಾದುದನ್ನ ಅಧಮವಾಗಿ ಕಾಣುವಂತೆ ಮಾಡಬೇಕು, ಸಾಮೂಹಿಕ ಚಿತ್ತವೃತ್ತಿಯನ್ನು ಪ್ರಚೋದಿಸಬೇಕು. ಮನಸೆಳೆವ ಮಂಕು ಮಾತನ್ನು ಆಡಬೇಕು, ಘೋಷಣೆಗಳನ್ನು ಉಗ್ಗಡಿಸಬೇಕು. ತನ್ನ ಚುನಾವಣೆಯ ವಾಗ್ದಾನಗಳನ್ನು ಸಲ್ಲಿಸಿದಂತೆ ತೋರ್ಪಡಿಸಿಕೊಳ್ಳಬೇಕು. ಇವು ಯಾವುದನ್ನೂ ನಡೆಸಲು ಸಾಧ್ಯವೇ ಇಲ್ಲ. ಏಕೆಂದರೆ ಅವೆಲ್ಲವೂ ಸರ್ವಸಾಮಾನ್ಯ ಗಾಳಿ ಮಾತು. ವಾಸ್ತವಕ್ಕೆ ಸನ್ನಿವೇಶಕ್ಕೆ ಸಂಬಂಧ ಬಹಳ ಕಡಮೆ. ಆದರೆ ತನ್ನ ಪರ, ಪಕ್ಷದ ಪರ ಓದು ವಾದವನ್ನು ರಾಜಕಾರಣಿ ಹೂಡಬೇಕಲ್ಲ. ಜಾಣತನದ ಮಾತಿನ ಮೂಲಕ, ಪ್ರಚಾರದ ಮೂಲಕ. ತಾನು ಎಂದೂ ಪ್ರಯತ್ನವನ್ನು ಸಹ ಮಾಡದಿದ್ದುದನ್ನು ಮಾಡಿ ಮುಗಿಸಿದವನಂತೆ ನಟಿಸಬೇಕು. ಜನತೆಯ ಕಣ್ಣಿಗೆ ಬಹಳ ವಿದ್ಯಾವಂತನಂತೆ, ಸುಸಂಸ್ಕೃತನಂತೆ ಸಮಸ್ತ ವಿದ್ಯಾಪಾರಂಗತನಂತೆ ಕಾಣಬೇಕು. ಅವನದು ಬರೀ ಶಾಸ್ತ್ರವ್ಯಾಸಂಗ, ಸಾಂಪ್ರದಾಯಿಕ ವಿದ್ಯಾಭ್ಯಾಸ ಆದರೆ ಇದು ಸಾಧ್ಯ. ಪುರಾತನ ಗ್ರೀಸಿನಲ್ಲಿದ್ದಂತೆ. ಆಧುನಿಕ ಪ್ರಜಾತಂತ್ರದಲ್ಲೂ ತರ್ಕದ ಜ್ಞಾನ, ವಾದದ ರೀತಿ ಒಂದು ಮುಖ್ಯ ಸ್ಥಾನವನ್ನು ಕೃತಕವಾಗಿ ಆಕ್ರಮಿಸಿದೆ. ಎಲ್ಲಾ ಶಾಲೆಗಳಲ್ಲೂ ವಿಶ್ವವಿದ್ಯಾನಿಲಯಗಳಲ್ಲೂ ಚರ್ಚಾಗೋಷ್ಠಿಗಳು, ವಾದ ಸಭೆಗಳು, ಅಣಕು – ಶಾಸನ ಸಭೆಗಳು ಇವೆ. ಇಲ್ಲಿಯೇ

ಮುಂದಿನ ವಕೀಲ, ರಾಜಕಾರಣಿ ತನ್ನ ವೃತ್ತಿಗೆ ಸಿದ್ಧತೆ ಮಾಡಿಕೊಳ್ಳುತ್ತಾನೆ. ಇಂಥ ಸಂಘಗಳಲ್ಲಿ ನಡೆವ ಚರ್ಚೆ ಸ್ವಾಭಾವಿಕವಾಗಿ ಪೂರಾ ಅವಾಸ್ತವ, ಅಸಂಬದ್ಧ ಆಗಿರುತ್ತವೆ. ಗಂಭೀರ ಪ್ರಭಾವಕಾರಿ ವಿಚಾರಕ್ಕೆ ಅಗತ್ಯವಾದ ಜ್ಞಾನ-ಅನುಭವಗಳು ವಿದ್ಯಾರ್ಥಿಗೆ ಇನ್ನೂ ಲಭಿಸಿರುವುದಿಲ್ಲ. ಆ ಲೋಪವನ್ನೆಲ್ಲ ಸಾಂಪ್ರದಾಯಿಕ ತರ್ಕದಿಂದ, ವಾಗ್ವೈಖರಿಯಿಂದ ಮುಚ್ಚಿಕೊಳ್ಳುತ್ತಾನೆ. ಆದುದರಿಂದ ಈ ಶಾಲೆ ಕಾಲೇಜಿನ ಚರ್ಚೆಗಳಲ್ಲಿ ಗೆದ್ದು ಬಹುಮಾನ ಪಡೆವ ಹುಡುಗ ಪ್ರಜಾತಂತ್ರದಲ್ಲಿ ರಾಜಕಾರಣಿಯಾಗಿ ಅವತರಿಸುತ್ತಾನೆ. ಈಗ ನಿಜವಾದ ರಾಜಕೀಯ ಧುರಂಧರರು ವಿರಳವಾಗಿರಲು ಇದೇ ಕಾರಣವೇನೋ. ಪ್ರಜಾತಂತ್ರಗಳಲ್ಲಿ ಕಾಪಟ್ಯ ಹೇಗೆ ನುಸುಳಿ ಬರುತ್ತದೆಂಬುದನ್ನೂ ಇದು ವಿವರಿಸುತ್ತದೆ.

ಅದೇನೆ ಇರಲಿ, ವಿದ್ಯಾಭ್ಯಾಸ ವಾಸ್ತವತೆಗೆ ಸಂಬಂಧಿಸಿರಬೇಕು. ತತ್ವ, ಆಚರಣೆ ಎರಡೂ ಒಂದಕ್ಕೊಂದು ಹೊಂದಿಕೊಂಡು ಬಲಗೊಳ್ಳಬೇಕು ಎಂಬ ವಿಚಾರ ಮಾತ್ರ ಎಂದೂ ಮರೆಯಾಗಲಿಲ್ಲ. ವಿಜ್ಞಾನ – ಪ್ರಯೋಗ ಶಾಲೆಗಳಲ್ಲಿ, ವಿವಿಧೋದ್ಯೋಗ ಮಂದಿರದಲ್ಲಿ ಈ ವಿಚಾರಕ್ಕೆ ಮನ್ನಣೆ ದೊರೆಯಿತು. ಯೂರೋಪಿನಲ್ಲಿ, ಅದಕ್ಕಿಂತ ಹೆಚ್ಚಾಗಿ ಅಮೆರಿಕಾದಲ್ಲಿ, ಬೃಹತ್ ಉದ್ಯೋಗಗಳಿಗೆ ಸೇರಿದಂಥ ಕೆಲವು ಅತ್ಯಂತ ಪ್ರವರ್ಧಮಾನ, ವಿಶಾಲ ವೈಜ್ಞಾನಿಕ – ಔದ್ಯೋಗಿಕ ಸಂಸ್ಥೆಗಳಿವೆ. ಹೀಗೆ ಕಾರಖಾನೆ-ಕರ್ಮಾಲಯಗಳಿಗೆ ಜೋಡಿಸಿರದ ವಿಜ್ಞಾನ ಯಂತ್ರ ಶಾಸ್ತ್ರ ಉದ್ಯೋಗ ಶಾಲೆಗಳೂ ಇವೆ. ಅಲ್ಲಿನ ವಿದ್ಯಾರ್ಥಿಗಳೂ ಸಹ ನಿಯಮದಂತೆ ಆಗಾಗ ಕಾರಖಾನೆ ಗಿರಣಿಗಳಿಗೆ ಪ್ರತ್ಯಕ್ಷ ಕೆಲಸ ಮಾಡಲು, ತರಬೇತು ಪಡೆಯಲು ಹೋಗಬೇಕು. ತತ್ವ ಅಭ್ಯಾಸ ಎರಡೂ ಜೊತೆಗೂಡಿ ನಡೆಯಬೇಕೆಂಬ ಸೂತ್ರ ಈ ಕ್ಷೇತ್ರಗಳಲ್ಲಿ ಮಾನ್ಯವಾಗಿದೆ. ದರ್ಶನ, ಸಾಹಿತ್ಯ ಕಲೆಗಳ ವ್ಯಾಸಂಗದಲ್ಲಿ ಮಾತ್ರ ಈ ಸೂತ್ರಕ್ಕೆ ಮನ್ನಣೆ ದೊರೆತಿಲ್ಲ. ಆಧುನಿಕ ನಾಗರಿಕತೆಯ, ಪ್ರಜಾತಂತ್ರದ ರಾಜಕೀಯದ ವಿಲಕ್ಷಣ ಆರ್ಥಿಕ – ಔದ್ಯೋಗಿಕ ಪರಿಸ್ಥಿತಿಯ ದೆಸೆಯಿಂದ ಹೀಗಾಯಿತೆಂದು ಆಗಲೇ ವಿವರಿಸಿದೆ. ಇಷ್ಟಾದರೂ ಈ ಕ್ಷೇತ್ರದಲ್ಲಿಯೂ ಪ್ರಾಯೋಗಿಕ ಶಾಲೆಗಳಿಗೇನು ಕೊರತೆಯಿಲ್ಲ. ಅವೂ ಒಳ್ಳೆಯ ಫಲವನ್ನೇ ಕೊಟ್ಟಿವೆ.

ಆಚರಣೆಯಲ್ಲಿ ಬಂದಿರದಿದ್ದರೂ ನಿರೀಕ್ಷಣೆ – ಕಾರ್ಯಗಳ ಮೂಲಕ ಶಿಕ್ಷಣ ನಡೆಯಬೇಕೆಂಬ ತತ್ವವನ್ನೇನೋ ಎಲ್ಲಾ ಆಧುನಿಕ ಶಿಕ್ಷಣ ಶಾಸ್ತ್ರಗಳೂ ಒಪ್ಪಿವೆ. ಚಿಕ್ಕ ಮಕ್ಕಳಿಗೆ ಕಿಂಡರ್‌ಗಾರ್ಟನ್ ಮಾಂಟಿಸೋರಿ ಪದ್ಧತಿಗಳು ಎಲ್ಲೆಲ್ಲೂ ಇವೆ. ಆಮೇಲೆ ಪ್ರಾಯೋಗಿಕ ರೀತಿಯ ಡಾಲ್ಟನ್ ಪದ್ಧತಿ, ವಿಶಿಷ್ಟ ಉದ್ಯಮ ಪದ್ಧತಿ ಬಂದವು. ಈ ಹೊಸ ಪದ್ಧತಿಗಳು ಇತರ ದೇಶಗಳಲ್ಲಿ ಏನು ಸಾಧಿಸಿವೆಯೋ, ಅಷ್ಟೇನೂ ಇಲ್ಲ. ಹಿಂದೂಸ್ತಾನದಲ್ಲಂತೂ ಇವನ್ನು ಪ್ರಾರಂಭಿಸಿ

ಮಕ್ಕಳ ಶಿಕ್ಷಣವನ್ನು ಬಹಳ ತುಟ್ಟಿ ಮಾಡಿ, ಕೇವಲ ಭಾಗ್ಯವಂತರ ಮೇಲಿನ ಮಧ್ಯಮ ವರ್ಗದವರ ಮಕ್ಕಳಿಗೆ ಹೊರತು ಉಳಿದವರಿಗೆ ಎಟುಕದಂತೆ ಮಾಡಿಕೊಂಡವು. ಬೊಂಬಾಯಂಥ ದೊಡ್ಡ ನಗರಗಳಲ್ಲಿ ಮಕ್ಕಳಿಗೆ ೮ ರೂಗಳಿಂದ ೧೫ ರೂಗಳವರೆಗೂ ಇದೆ ಈ ಶುಲ್ಕ. ಇದರ ಜೊತೆಗೆ ವಾಹನ ಸೌಲಭ್ಯಕ್ಕೆ ಬೇರೆ ನಾಲ್ಕೆಂಟು ರೂಪಾಯಿ. ಇದು ಕಿಂಡರ್ ಗಾರ್ಟನ್ ಶಾಲೆಗಳ ವೆಚ್ಚ. ಉದ್ಯಮ ಪದ್ಧತಿಯ ವೆಚ್ಚ ಶ್ರೀಮಂತರಿಗೂ ಮೀರಿದುದು. ಈ ಪದ್ಧತಿಗಳ ಮೂಲ ತತ್ವಗಳೇನೋ ಯೋಗ್ಯವೇ. ಆದರೆ ಹಿಂದುಸ್ಥಾನದಂಥ ಬಡದೇಶಕ್ಕೆ ಈ ಪದ್ಧತಿಗಳು ಬಹಳ ತುಟ್ಟಿ. ಈ ಅಪಾರ ವ್ಯಯ ಪ್ರಯಾಸಗಳಲ್ಲಿದೆ ಇವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲೂ ಸಾಧ್ಯವಿಲ್ಲ. ಒಂದು ವೇಳೆ ಒಂದೆರಡು ವರ್ಷ ಎಳೆಮಗುವಿಗೆ ಈ ಬಗೆಯ ಶಿಕ್ಷಣವನ್ನು ಕೊಟ್ಟರೂ ಆಮೇಲೆ ಸಾಂಪ್ರದಾಯಿಕ ವಿದ್ಯಾಭ್ಯಾಸವೇ ತಾನೇ. ಅದರಲ್ಲಿ ಬಂದ ಲಾಭವೆಲ್ಲವೂ ಆಮೇಲೆ ಶಾಲೆಯ ಕೊಠಡಿಯಲ್ಲಿ ಯಾಂತ್ರಿಕವಾಗಿ ಮಾಡಿದ ರಚನಾತ್ಮಕವಲ್ಲದ ನಿಸ್ಸಾರ ಬೌದ್ಧಿಕ ಕಾರ್ಯದಿಂದ ಕೊಚ್ಚಿಹೋಗುತ್ತದೆ.

ತಮ್ಮ ಯೋಜನೆಯ ಮೂಲಕ ಗಾಂಧೀಜಿ ಸಾಧಿಸಬಯಸುವುದು ಇಷ್ಟು– ಲಾಭಕರ ರಚನಾತ್ಮಕ ಶರೀರಶ್ರಮದ ಮೂಲಕ ಹಿಂದುಸ್ತಾನ ಈಗಿನ ಪರಿಸ್ಥಿತಿಯಲ್ಲೂ ಶಿಕ್ಷಣ ಸರ್ವಸಾಧ್ಯ, ಆಚರಣನಿಷ್ಠ ಆಗಬೇಕು. ಶಿಕ್ಷಣವನ್ನು ಸುಧಾರಿಸಿ ಸುಲಭಗೊಳಿಸಿ ಆಧುನಿಕ ಶಿಕ್ಷಣ ಪದ್ಧತಿಯ ವ್ಯಾಪಕತೆಯನ್ನು ವಿಸ್ತಾರಗೊಳಿಸಿ, ವಿದ್ಯೆಯ ಅಭ್ಯಾಸವನ್ನೂ ಶಿಕ್ಷಣತತ್ವವನ್ನೂ ಮೇಳಗೂಡಿಸಬೇಕೆಂಬುದು ಅವರ ಉದ್ದೇಶ. ಮಕ್ಕಳಿಗೆ ಆಟದ ಸಾಮಗ್ರಿಗಳನ್ನು ಒದಗಿಸಿದ ಮಾತ್ರಕ್ಕೆ, ವೃಥಾ ಕಾರಣ, ಧನ ವ್ಯಯ ಪದಾರ್ಥಗಳ ವ್ಯಯಗಳ ಲೆಕ್ಕ ಹಿಡಿಯದೆ, ಆರ್ಥಿಕ ಪ್ರಯೋಜನವನ್ನು ಗಮನಿಸದೆ, ಅಜ್ಞಾನದಿಂದ ಕೆಲಸ ಮಾಡಿದ ಮಾತ್ರಕ್ಕೆ, ಅದು ಸಾಧ್ಯವಾಗದು. ಎಚ್ಚರಿಕೆಯಿಂದ ನಿಖರವಾಗಿ ಒಂದು ಕೈಗಾರಿಕೆಯನ್ನು ಕಲಿಸಿ ಆರ್ಥಿಕ ಪ್ರಯೋಜನದ ಅಳತೆಗೋಲಿನಿಂದ ಅದರ ನೈಪುಣ್ಯವನ್ನು ಪ್ರಗತಿಯನ್ನು ಸದಾ ಗಮನಿಸುತ್ತ, ಸಾಧಾರಣ ಗೌರವಪೂರ್ಣ ಜೀವನೋಪಾಯಕ್ಕಲ್ಲದೆ ಸಾಮಾನ್ಯ ವಿದ್ಯಾಭ್ಯಾಸಕ್ಕೂ ಒಂದು ಉಪಯುಕ್ತ, ವೈಜ್ಞಾನಿಕ ಪದ್ಧತಿಯಾಗಿ ಕಲಿಸಿದರೆ ಮಾತ್ರ ಸಾಧ್ಯ. ಇಷ್ಟು ಜಾಗರೂಕತೆಯಿಂದ ಎಲ್ಲಾ ವಿವರಗಳಿಗೂ ಗಮನಕೊಟ್ಟು ಕೂಲಂಕುಷವಾಗಿ ಮಾಡಿದ ಕೆಲಸ ವೈಜ್ಞಾನಿಕ ಕಾರ್ಯ. ಆದುದರಿಂದ ನಿಜವಾದ ಶಿಕ್ಷಣ ಎಂದರೆ ವ್ಯಕ್ತಿ ವಿಕಾಸ. ಸಾಮಾಜಿಕ ಪ್ರಗತಿಯ ದಿಶೆಯಲ್ಲಿ ಗಾಂಧೀ ಯೋಜನೆ ಸಾಧಿಸಬಹುದಾದುದನ್ನು ಉತ್ಪ್ರೇಕ್ಷೆ ಮಾಡಲು ಬರುವಂತಿಲ್ಲ. ★ (ಮುಂದುವರೆಯುವುದು)

ಸ್ವರಾಜ್ಯ. ಸ್ವದೇಶೀ ಮತ್ತು ಸತ್ಯಾಗ್ರಹ

– ಕೆ. ಎಸ್. ನಾರಾಯಣಸ್ವಾಮಿ

ಭಾರತ ಸ್ವಾತಂತ್ರ್ಯ ಸಂಗ್ರಾಮದ ವಿಶಿಷ್ಟ ಮಹಾಘೋಷಗಳೆನಿಸಿದ್ದ ಮೂರು ಉದ್ಘೋಷಿತ ಮಂತ್ರಗಳು ಸ್ವರಾಜ್ಯ, ಸ್ವದೇಶೀ ಮತ್ತು ಸತ್ಯಾಗ್ರಹ. ಇಪ್ಪತ್ತನೆಯ ಶತಮಾನ ಹುಟ್ಟಿದ ಮೊದಲ ದಶಕದಲ್ಲೇ ಈ ಮೂರೂ ಉದ್ಭವವಾದುದೊಂದು ಅಭೂತಪೂರ್ವ ಚಾರಿತ್ರಿಕ ಘಟನೆಯೆಂದೇ ವಿಶ್ವ ಚರಿತ್ರೆಯಲ್ಲಿ ದಾಖಲಾದ ಸಂಗತಿ. ಭಾರತ ತನ್ನ ದಾಸ್ಯವಿಮೋಚನೆಗಾಗಿ ಮೈಕೊಡವಿಕೊಂಡೆದ್ದು ತನ್ನೆಲ್ಲ ಪ್ರಾಚೀನ ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಶಕ್ತಿಗಳನ್ನು ಜಾಗೃತಗೊಳಿಸಿಕೊಂಡು. ಆತ್ಮವಿಶ್ವಾಸವನ್ನು ಕ್ರೋಢೀಕರಿಸಿಕೊಳ್ಳಲು ಈ ಮಹಾ ಮಂತ್ರಗಳು ಮೂಲಕಾರಣಗಳಾದವು. ಅವರೆವಿಗೆ ರಾಜಕೀಯ ಕ್ಷೇತ್ರ ಕೇವಲ ಶಸ್ತ್ರಶಕ್ತಿ. ಧನಶಕ್ತಿ ಮತ್ತು ಶಾಸನಶಕ್ತಿಗಳ ಆಧಾರದ ಮೇಲೇ ತನ್ನೆಲ್ಲ ಮಹಾಸಾಧನೆಗಳನ್ನು ಮಾಡಬಹುದೇ ಹೊರತು ಅಧ್ಯಾತ್ಮಿಕ ಮತ್ತು ನೈತಿಕ ಬಲಗಳು ನಿಷ್ಪ್ರಯೋಜಕ ಎಂದೇ ಭಾವಿಸಲಾಗಿತ್ತು. ಅದೇ ಅರ್ಥದಲ್ಲಿ ಹತ್ತೊಂಬತ್ತನೇ ಶತಮಾನದಲ್ಲಾದ ರಾಜಕೀಯ ಕ್ರಾಂತಿಗಳಲ್ಲಿ, ಅಂತರಾಷ್ಟ್ರೀಯ ಯುದ್ಧಗಳಲ್ಲಿ, ಸ್ವಾತಂತ್ರ್ಯ ಸಾಧನೆಯ ಸಮರಗಳಲ್ಲಿ ಶಸ್ತ್ರಾಸ್ತ್ರ ಸಜ್ಜಿತ ವಿಧ್ವಂಸಕ ಸಾಹಸಗಳಿಂದಲೇ ರಾಜಕಾರಣದಲ್ಲಿ ಪ್ರಗತಿ ಸಾಧಿಸಬೇಕೆಂಬ ದೃಢವಾದ ನಂಬಿಕೆಯಿತ್ತು. ಮಾನವಧರ್ಮ, ಮಾನವೀಯ ಮೌಲ್ಯಗಳು, ಸತ್ಯ– ಪ್ರೇಮ – ಕರುಣೆಗಳಂತಹ ಗುಣಗಳು ಕೇವಲ ವಯಕ್ತಿಕ ಮೋಕ್ಷ ಸಾಧನೆಯ ಮಾರ್ಗಗಳು ಮಾತ್ರ ಎಂದೇ ಸಾರಲಾಗುತ್ತಿತ್ತು. ಪ್ರಜಾಪ್ರಭುತ್ವ ತತ್ವವನ್ನಂಗೀಕರಿಸಿ ಸರ್ವಾಧಿಕಾರೀ ಕೇಂದ್ರಿತ ರಾಜ್ಯಾಧಿಕಾರವನ್ನು ನಿರಾಕರಿಸುತ್ತ ಚರಿತ್ರೆಯ ಕಾಲಚಕ್ರ ಉರುಳಿದೆ ದಂಡಶಕ್ತಿ, ಶಾಸನಶಕ್ತಿ ಮತ್ತು ಧನಶಕ್ತಿಗಳು ಇದೇ ಸಮಾಜಗಳಲ್ಲಿ ವಿಚಾರ ಪರಿವರ್ತನೆ ತರಲಾರವು. ಶುದ್ಧ ನೈತಿಕ ಪ್ರಜಾಪ್ರಭುತ್ವ ಸಿದ್ಧಾಂತಗಳನ್ನು ಸ್ಥಾಯಿಯಾಗಿ ನೆಲೆಗೊಳಿಸುವ ಪ್ರಯತ್ನಗಳನ್ನು ಅವು ವಿಫಲಗೊಳಿಸುತ್ತವೆ. ಈ ಪರಿವರ್ತನೆಗೆ ಕ್ರೋಢೀಕೃತ ಜನಶಕ್ತಿಯ ನೈತಿಕ ಸಂಘಟನೆಯೇ ನಿಜವಾದ ತಳಹದಿಯಾದೀತು ಎಂಬ ಸಾರ್ವತ್ರಿಕ ಅರಿವು ಮೂಡಿಬರಲು ಭಾರತದ ಸ್ವಾತಂತ್ರ್ಯ ಸಂಗ್ರಾಮದ ವಿಶಿಷ್ಟ ಸಾಧನಗಳು ರಾಜಕೀಯ ಕ್ಷೇತ್ರದ ಚಿಂತನ ರೀತಿಯ ಇಪ್ಪತ್ತನೆಯ ಶತಮಾನದಲ್ಲಿ ಪೂರ್ಣವಾಗಿ ಬದಲಿಸಿಬಿಟ್ಟವು.

"ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು; ನಾವದನ್ನು ಪಡೆದೇ ತೀರು

ತ್ತೇವೆ" ಎಂದು ಮೊದಲು ಘೋಷಿಸಿದ ಭಾರತೀಯ ಮಹಾನಾಯಕ ಲೋಕಮಾನ್ಯ ತಿಲಕರು. ಅವರೇನು ಶಸ್ತ್ರಾಸ್ತ್ರ ಸಜ್ಜಿತ ಯೋಧರಾಗಿ ಯುದ್ಧಶಾಸ್ತ್ರ ಪರಿಣಿತರಾಗಿ ಸಂಗ್ರಾಮಕ್ಕೆ ಇಳಿದ ಸೇನಾಧಿಪತಿಗಳಾಗಿರಲಿಲ್ಲ. ಅಧ್ಯಾತ್ಮ ಪ್ರಧಾನವಾದ ಧೀಶಕ್ತಿಯು ಪ್ರಚಂಡಶಕ್ತಿಯಾಗಿ ಬೆಳಗಿದ ಸುಸಂಸ್ಕೃತ ಕರ್ಮಯೋಗಿ. ೧೯೦೫ರ ಸುಮಾರಿಗೆ ವಿದೇಶೀ ಸರ್ಕಾರದಡಿಯ ದಾಸ್ಯವನ್ನು ನಿರಾಕರಿಸಿ ಎದೆಗಾರಿಕೆಯಿಂದ ಮುಂದೆ ನಿಂತು ಸಾಮ್ರಾಜ್ಯಶಾಹಿಗಳಿಗೆ ಸವಾಲಾಗಿ ಈ ಸ್ವರಾಜ್ಯ ಸಾಧನೆಯ ಜನ್ಮಸಿದ್ಧ ಹಕ್ಕನ್ನು ಪ್ರತಿಪಾದಿಸಿ ತಿಲಕರು ನಿಂತರು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮುಂಚೂಣಿಯಲ್ಲಿ ನಿಂತ ಮಹಾವೀರರೆನಿಸಿದ್ದರೂ ತಿಲಕರು, ಗೋಖಲೆಯವರು, ಅರವಿಂದ ಘೋಷರು, ರವೀಂದ್ರನಾಥಠಾಕೂರರು ಮುಂತಾದವರು ಪ್ರತಿಪಾದಿಸಿದ ಹೋರಾಟದ ಸೂತ್ರಗಳು ಪ್ರಧಾನವಾಗಿ 'ಸಾತ್ವಿಕ ಪ್ರತಿರೋಧ'. ಹಿಂಸಾತ್ಮಕ ಯುದ್ಧ ಘೋಷಣೆಗಳಿಂದ ದೂರವಾಗಿ ವಿಧ್ವಂಸಕ ದಂಗೆಗಳನ್ನು ವಿರೋಧಿಸಿ ದೇಶಪ್ರೇಮದ ದೀಕ್ಷೆಯನ್ನು ಜನತೆಗೆ ನೀಡಿದ ಮೊದಲ ಘೋಷ 'ಸ್ವರಾಜ್ಯ'.

ಆಗ ಕಾಂಗ್ರೆಸ್ಸಿನಲ್ಲಿ ಮಂದಗಾಮಿಗಳು ಬ್ರಿಟಿಷರ ಆಶ್ರಯದಲ್ಲೇ ಕೆಲವು ನಾಗರಿಕ ಹಕ್ಕುಗಳಿಗಾಗಿ ಬೇಡಿಕೆ ಸಲ್ಲಿಸುವಲ್ಲಿ ಮಾತ್ರ ನಿರತರಾಗಿರುತ್ತಿದ್ದರು. ತಿಲಕರ ನಾಯಕತ್ವದ ತೀವ್ರಗಾಮಿ ಪಕ್ಷವು ಸ್ವರಾಜ್ಯ ಸ್ಥಾಪನೆಯತ್ತ ಪೂರ್ಣ ಲಕ್ಷಹರಿಸಿತು. "ರಾಷ್ಟ್ರದ ಸ್ವಾತಂತ್ರ್ಯದತ್ತ ಗಮನಕೊಡದೆ ಸಾಮಾಜಿಕ ಸುಧಾರಣೆ, ಶೈಕ್ಷಣಿಕ ಪ್ರಗತಿ, ಆರ್ಥಿಕ ಸಮೃದ್ಧಿ, ಕೈಗಾರಿಕ ವಿಸ್ತರಣೆ ಮತ್ತು ಜನಾಂಗದ ನೈತಿಕ ಅಭಿವೃದ್ಧಿ ಸಾಧಿಸಲಾರೆವು" ಎಂಬ ಘೋಷಣೆ ರಾಷ್ಟ್ರೀಯ ವೇದಿಕೆಗಳಲ್ಲಿ ಮೊಳಗಿತು. ಸ್ವರಾಜ್ಯ ಎಂಬ ಕಲ್ಪನೆಯು ಪೂರ್ಣ ಅರ್ಥ ಕ್ರಮೇಣ ಭಾರತೀಯರ ಬೌದ್ಧಿಕ ಮತ್ತು ಭಾವನಾತ್ಮಕ ಬಾಳಿನಲ್ಲಿ ಇಳಿಯ ತೊಡಗಿತು. "ಈ ರಾಷ್ಟ್ರೀಯತಾ ಧರ್ಮಕ್ಕೆ ಸಮ್ಮತಿಸಬೇಕಾದಲ್ಲಿ ಅದನ್ನು ಒಂದು ಧಾರ್ಮಿಕ ಚೈತನ್ಯವಾಗಿ ಹೊರ ಹೊಮ್ಮುವಂತೆ ಮಾಡಬೇಕು. ಆತ್ಮಸಂಸ್ಕಾರದ ಸಾಕ್ಷಾತ್ಕಾರವೇ ಧಾರ್ಮಿಕ ಆದರ್ಶ. ಸಮಸ್ತ ಜನಕೋಟಿಯಲ್ಲಿ ಅದು ಚೈತನ್ಯ ಪೂರ್ಣವಾಗಿ ಪ್ರಕಟವಾಗಬೇಕು" ಎಂದು ಮಹರ್ಷಿ ಅರವಿಂದರು ತಮ್ಮ 'ಯುಗಾಂತರ' ಪತ್ರಿಕೆಯಲ್ಲಿ ಸತತವಾಗಿ ಬೋಧಿಸುತ್ತ ಬಂದರು. ತಿಲಕರು ಇನ್ನೂ ಮುಂದೆ ಹೋಗಿ ಸ್ವರಾಜ್ಯಕ್ಕಾಗಿ ಬಲಿದಾನಕ್ಕೂ ಸಿದ್ಧರಾಗಿ ಎಂದರು. ಆ ಕಾಲಕ್ಕೆ ನಾಯಕ ಪ್ರಭಾವಳಿಯಲ್ಲಿ ಮುಕುಟಮಣಿಗಳಂತಿದ್ದ ಮಹಾರಾಷ್ಟ್ರದ ತಿಲಕರು, ಪಂಜಾಬಿನ ಲಾಲಾಲಜಪತ್‌ರಾಯ್ ಮತ್ತು ಬಂಗಾಳದ ಬಿ. ಎನ್ ಚಂದ್ರಪಾಲ್ (ಲಾಲ್-ಬಾಲ್-ಪಾಲ್) ಸ್ವಾತಂತ್ರ್ಯ ಸಂಗ್ರಾಮವನ್ನು

ಅಭೂತಪೂರ್ವ ಮಜಲಿಗೆ ಕೊಂಡೊಯ್ದರು. ೧೯೦೫ರಲ್ಲಿ ಮಾಡರನ್‌ರೆವ್ಯೂ ಬರೆದ ಒಂದು ಲೇಖನದಲ್ಲಿ ಲಾಲಾಲಜಪತ್‌ರಾಯ್:–

"ನಮ್ಮ ಮುಂದೆ ಪ್ರಮುಖವಾಗಿರುವ ಪ್ರಶ್ನೆ ಧಾರ್ಮಿಕ ಪ್ರಜ್ಞೆಯದು. ಸಿದ್ಧಾಂತ ಮತ್ತು ಮತಶ್ರದ್ಧೆಗಳ ಅರ್ಥದಲ್ಲಲ್ಲ. ನಮ್ಮಲ್ಲಿನ ಪರಮೋನ್ನತ ಭಕ್ತಿಭಾವವನ್ನು ಉದ್ದೀಪಿಸುವ ಮತ್ತು ಗರಿಷ್ಟ ತ್ಯಾಗವನ್ನು ಅಪೇಕ್ಷಿಸುವ ಧಾರ್ಮಿಕ ನಡತೆ. ರಾಷ್ಟ್ರಪ್ರೇಮವನ್ನು ಧರ್ಮದ ಮಟ್ಟಕ್ಕೆ ಏರಿಸಿ ಸ್ವರಾಜ್ಯಕ್ಕಾಗಿ ಬದುಕುವ ಅಥವಾ ಪ್ರಾಣ ಬಲಿದಾನ ಮಾಡುವ ಮಹತ್ವಾಕಾಂಕ್ಷೆ ನಮ್ಮ ಪರಮಧ್ಯೇಯವಾಗಬೇಕು" ಎಂದರು. ೧೯೦೫ ಮತ್ತು ೧೯೦೬ರ ಮಧ್ಯೆ ಈ ಮಹಾನಾಯಕರ ನೇತೃತ್ವದಲ್ಲಿ ದೇಶವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕುಟಿಲ ರಾಜಕೀಯವನ್ನೆದುರಿಸಿ ಅಂದಿನ ವೈಸ್‌ರಾಯ್ ಕರ್ಜನ್‌ನ "ಬಂಗಾಳ ವಿಭಜನೆ"ಯ ವಿರುದ್ಧ ಪ್ರಚಂಡವಾದ ಚಳುವಳಿಯನ್ನು ಹೂಡಿತು. ಸ್ವರಾಜ್ಯ ಸಾಧನೆಯಲ್ಲಿ ಇದೊಂದು ಮೈಲಿಗಲ್ಲಾಗಿ ನಿಂತಿದೆ. ೧೯೦೬ರ ಕಾಂಗ್ರೆಸ್ ಅಧಿವೇಶನದಲ್ಲಿ ಈ ಹೋರಾಟದ ಹೊಸಮಜಲಾಗಿ 'ಸ್ವದೇಶೀ' ಚಳುವಳಿಯ ಸಲಹೆ ಮೂರ್ತವೆತ್ತಾಗಿ ಉದಯಿಸಿ ಎಲ್ಲ ಗಮನವೂ ಆ ಪ್ರಚಂಡ ಬಿರುಗಾಳಿಯ ಮೇಲೆ ಕೇಂದ್ರೀಕೃತವಾಯಿತು.

– ೨ –

ಸ್ವಾತಂತ್ರ್ಯದ ಬಗ್ಗೆ ಭಾವುಕತೆ, ಸಮರೋತ್ಸಾಹ, ತ್ಯಾಗ ಸಿದ್ಧತೆಗಳು ಜನತೆಯಲ್ಲಿ ಚಿಮ್ಮಿದವು. ಈ ಉತ್ಸಾಹವನ್ನು ಕ್ರೋಢೀಕರಿಸಿ ಹೋರಾಟದ ಜೀವಂತ ಕಾರ್ಯಕ್ರಮಗಳನ್ನು ರೂಪಿಸಿದುದು 'ಸ್ವದೇಶೀ' ಸಿದ್ಧಾಂತ. ಬಂಗಾಳ ವಿಭಜನೆಯ ಕಾಲಕ್ಕೆ ೧೯೦೫ರಲ್ಲಿ ತಿಲಕರ ನೇತೃತ್ವದಲ್ಲಿನ ತೀವ್ರಗಾಮಿಗಳು ದೇಶದ ಮುಂದಿಟ್ಟ ಸಂಗ್ರಾಮ ಸೂತ್ರ ವಿದೇಶೀವಸ್ತು ಬಹಿಷ್ಕಾರ ಚಳುವಳಿ. ಆ ಬಗ್ಗೆ ತೀರ್ಮಾನಿಸಿದ ನಿರ್ಣಯವನ್ನು ೧೯೦೫ರಲ್ಲಿ ಮಂಡಿಸಿ ಅನುಮೋದಿಸಿದವರು ಬಂಗಾಳಿಗಳಾದ ನವಾಬ್‌ಖ್ವಾಡಾ, ಅತಿಕುಲ್ಲಾ ಮತ್ತು ಅಂಬಿಕಾಚರಣ ಮುಜುಮ್‌ದಾರರು. ಹಿಂದೂಗಳೂ ಮುಸಲ್ಮಾನರೂ ಕೂಡಿ ವಿಭಜನೆಯ ಸೂಚನೆಯನ್ನು ಪ್ರತಿಭಟಿಸಬೇಕೆಂದು ಸಾರ್ವಜನಿಕ ಘೋಷಣೆ ಎಂದಷ್ಟೇ ಹೇಳಲಾಗಿತ್ತು. ಅಹಿಂಸಾತ್ಮಕ ಅಸಹಕಾರದ ಪೂರ್ಣಕಲ್ಪನೆ ಇನ್ನೂ ಮೂಡಿಬಂದಿರಲಿಲ್ಲ. ಬಹಿಷ್ಕಾರ ಚಳವಳಿಯನ್ನು ಆದಷ್ಟು ಉಗ್ರವಾಗಿ ಪ್ರಾರಂಭಿಸಿ ಸರ್ಕಾರದ ದಬ್ಬಾಳಿಕೆಯನ್ನು ಅಪ್ರತಿಹತವಾಗಿ ಪ್ರತಿಭಟಿಸಿ ನಿಲ್ಲಬೇಕೆಂಬ ಸಂದೇಶ ಸ್ವದೇಶಿ ಚಳುವಳಿಯಲ್ಲಿ ಪ್ರಧಾನವಾಗಿ ಕ್ರಿಯಾಶೀಲವಾಯಿತು. ದೇಶಿಯ ಉದ್ಯಮಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸಿ ವ್ಯಾಪಾರೀ ಲಾಭ

ಬಡಕರಾಗಿ ಬಂದು ಅಧಿಕಾರ ಹಿಡಿದ ಇಂಗ್ಲೆಂಡಿನ ಆಕ್ರಮಣಕಾರರನ್ನು ದೇಶದಿಂದ ಹೊರದೂಡಬೇಕೆಂಬ ತೀವ್ರಾಕಾಂಕ್ಷೆ ಇತ್ತು. ಬಹಿಷ್ಕಾರ ಮತ್ತು ಸ್ವದೇಶೀ ಎಂಬ ಪದಗಳು ಹೊಸ ಅರ್ಥವನ್ನೂ ಹೊಸ ಪ್ರಚೋದನೆಯನ್ನೂ ನೀಡಿದವು. ಐದುಕೋಟಿ ಬಂಗಾಳಿಗಳು ತಮ್ಮ ಅಸ್ತಿತ್ವವನ್ನು ಅಖಂಡವಾಗಿ ಉಳಿಸಿಕೊಳ್ಳಲು ತಮ್ಮ ಗುರಿಗಳನ್ನು ಸ್ಪಷ್ಟಪಡಿಸಿ ಹೋರಾಟ ಮಾಡಲು ಒಟ್ಟುಗೂಡಿದರು. ದೇಶಕ್ಕೆ ದೇಶವೇ ಅವರ ಹಕ್ಕೊತ್ತಾಯದ ಮಹಾ ಪ್ರಯತ್ನಕ್ಕೆ ಧ್ವನಿಗೂಡಿಸಿ ಎಲ್ಲೆಲ್ಲೂ ಈ ಸ್ವದೇಶೀ ಮನೋಧರ್ಮ ಬೆಳೆಯಿತು. ಪ್ರಧಾನವಾಗಿ ಇಂಗ್ಲೆಂಡಿನ ಬಟ್ಟೆಗಿರಣಿಗಳಿಗೆ ಬೃಹದ್ ವ್ಯಾಪಾರದ ಮಾರುಕಟ್ಟೆಯಾದ ಬೊಂಬಾಯಿ ಅಹಮದಾಬಾದಗಳು ಆಳರಸರ ಕೈವಶವಾಗಿ ಸ್ವದೇಶೀ ಬಟ್ಟೆ ಉದ್ಯಮಗಳು ನಾಶವಾಗಿದ್ದವು. ಭಾರತೀಯರು ಕೇವಲ ಹತ್ತಿ ಬೆಳೆದು ರಫ್ತುಮಾಡುವ ದುಡಿಮೆಗಾರರಾಗಿ ಪರಾವಲಂಬೀ ಬಡರೈತರಾಗಿಬಿಟ್ಟರು. ಭಾರತದ ಗಿರಣಿ ಮಾಲೀಕರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಂಡರು. ಅಗಾಧ ಲಾಭಗಳಿಸಿ ಶ್ರೀಮಂತರಾದರು. ಗ್ರಾಮ್ಯ ಗ್ರಾಮಗಳಲ್ಲಿನ ನೇಕಾರರೂ ನೂಲುವರೂ ನಿರ್ಗತಿಕರಾಗೇ ಉಳಿದರು. ಉದ್ಯಮಗಳು ವಿದೇಶೀ ಬಂಡವಾಳದ ಸಾಮ್ಯದಿಂದ ದೇಶೀಯ ಉದ್ಯೋಗಪತಿಗಳ ಕೈಸೇರಿ ಬಂಡವಾಳಗಾರರ ರಾಜ್ಯ ಪ್ರಬಲವಾಗುತ್ತ ಶೋಷಣೆಯ ಆ ಆರ್ಥಿಕ ವ್ಯವಸ್ಥೆಯೇ ಮುಂದುವರಿಯಿತು. ಮುಂದೆ ಈ ವರ್ಗವೂ ವಿದೇಶೀಯರ ಕೈಗೊಂಬೆಗಳಂತೆ ವರ್ತಿಸಿತು.

ಅಂದಿನ ವಿದೇಶೀ ಬಹಿಷ್ಕಾರದ ಕಾರ್ಯಕ್ರಮಗಳು ಹೀಗಿದ್ದವು : ೧. ಇಂಗ್ಲೆಂಡಿನ ಬಟ್ಟೆ, ಸಕ್ಕರೆ, ಉಪ್ಪು ಮುಂತಾದ ವಸ್ತುಗಳ ವರ್ಜನೆ; ೨. ಇಂಗ್ಲೀಷ್ ಭಾಷೆಗೆ ಬಹಿಷ್ಕಾರ; ೩. ಸರ್ಕಾರದ ಕಾರ್ಯಾಲಯಗಳಲ್ಲಿ ಸಮಿತಿಗಳಲ್ಲಿ ಗೌರವ ಸದಸ್ಯರು ರಾಜಿನಾಮೆ ನೀಡುವುದು; ೪. ವಿದೇಶೀ ವಸ್ತುಗಳನ್ನು ಬಳಸುವವರ ಮೇಲೆ ಸಾಮಾಜಿಕ ಬಹಿಷ್ಕಾರ ಘೋಷಿಸಿ ಸಹಭೋಜನ ನಿರಾಕರಣೆ, ವಿವಾಹ ಸಂಬಂಧಗಳನ್ನು ನಿಲ್ಲಿಸುವುದು, ವ್ಯಾಪಾರಿಗಳಿಗೆ ಪ್ರತಿಬಂಧನ, ಕ್ಷೌರಿಕರೇ ಮೊದಲಾದ ಸೇವಾ ನಿರತರು ಅವರಿಗೆ ಸೇವೆ ಮಾಡದಿರುವುದು – ಮುಂತಾದ ಸಾರ್ವತ್ರಿಕ ಕಾರ್ಯ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಾರ್ವಜನಿಕರು ಭಾಗವಹಿಸುವುದು – ಈ ಚಳುವಳಿ ಪರಿಣಾಮಕಾರಿ ಪ್ರಬಲ ಅಸ್ತ್ರವಾಯಿತು. ರವೀಂದ್ರನಾಥ ಠಾಕೂರ್, ಪ್ರಫುಲ್ಲ ಚಂದ್ರರಾಯ್, ಸುರೇಶಚಂದ್ರ ಬ್ಯಾನರ್ಜಿ ಮುಂತಾದ ಬುದ್ಧಿಜೀವಿಗಳೇ ಮುಂದಾಳಾಗಿ ನಿಂತು ನಡೆಸಿದ ಈ ಚಳುವಳಿ ಅಘೋಷಿತ ಸಂಗ್ರಾಮದಂತೆ

ವ್ಯಾಪಿಸಿ ಬೆಳೆಯಿತು. ಸ್ವದೇಶೀ ವ್ರತ ಕೇವಲ ಮಾರುಕಟ್ಟೆಯ ವಲಯಕ್ಕೆ ಸೀಮಿತವಾದರೂ ಜನತೆಯ ಸ್ವಯಂ ಪ್ರೇರಿತ ಪ್ರತಿರೋಧವನ್ನು ಸಂಘಟಿಸು ವಲ್ಲಿ ಏಕೈಕ ಯಶಸ್ವೀ ಸಾಧನವಾಯಿತು. ಹಿಂಸೆ – ಅಹಿಂಸೆಗಳ ಪ್ರಶ್ನೆ ಪ್ರಧಾನವಾಗಿರಲಿಲ್ಲ. ಅನೇಕ ಕ್ರಮಗಳು ಅನ್ಯಾಯವೂ, ಕಾನೂನು ಬಾಹಿರವೂ, ರಹಸ್ಯ ಪಿತೂರಿಗಳಲ್ಲಿ ತೊಡಗಿದುದೂ ಆಗಿದ್ದವು. ಗುರಿಸಾಧಿಸಲು ಯಾವ ಸಾಧನವಾದರೂ ಗುರಿ ಎಂಬ ಸೂತ್ರವನ್ನು ನಿರಾಕರಿಸಿರಲಿಲ್ಲ. ಜನತೆ ಶಸ್ತ್ರಾ ಸ್ತ್ರಗಳನ್ನು ಬಳಸುವಲ್ಲಿ ಶಿಕ್ಷಣರಹಿತರಾಗಿದ್ದರು. ನಿಶ್ಶಸ್ತ್ರರಾಗಿ ಸಾಮೂಹಿಕ ಸಂಖ್ಯಾ ಬಲದ ಒತ್ತಡಗಳನ್ನೂ ನಿರ್ಮಾಣಮಾಡಿ ಸ್ವರಾಜ್ಯದ ಒಟ್ಟು ಬೇಡಿಕೆಗೆ ಪೋಷಕವಾಗಿಯೇ ಚಳುವಳಿಗಳು ಬೆಳೆಯುತ್ತಿದ್ದವು. ಸೀಮಿತ ಉದ್ದೇಶಗಳಿಗೆ ಮೀಸಲಾಗಿದ್ದರೂ ಕ್ರಮೇಣ ಆ ಉದ್ದೇಶಗಳು ಹಿಂದಕ್ಕೆ ಸಂದು ಒಂದು ಮಹೋದ್ದೇಶದ ಗುರಿಯೆಡೆಗೆಸಾಗಿತು. ಪೂರ್ಣ ಸ್ವರಾಜ್ಯದ ಭವ್ಯ ಕಲ್ಪನೆಯಲ್ಲಿ ಸ್ವದೇಶೀ ಧರ್ಮ ಒಂದು ಅವಿಭಾಜ್ಯ ಅಂಗವಾಗಿ ರಾಷ್ಟ್ರೀಯ ಹೋರಾಟದಲ್ಲಿ ಲೀನವಾಯಿತು.

–೩–

ಸತ್ಯಾಗ್ರಹ ಒಂದು ಹೊಚ್ಚ ಹೊಸ ಪ್ರತಿಭಟನಾ ಪ್ರಕ್ರಿಯೆಯಾಗಿ ಸಾರ್ವಜನಿಕ ಜೀವನದ ಸಮಸ್ಯೆಗಳ ಪರಿಹಾರಕ್ಕಾಗಿ ಹುಟ್ಟಿಕೊಂಡದ್ದು ಗಾಂಧೀ ಜಿಯ ದಕ್ಷಿಣ ಆಫ್ರಿಕದ ಪ್ರಯೋಗಗಳಿಂದ. ೧೮೯೪ರಲ್ಲಿ ಯುವಕ ಬ್ಯಾರಿಸ್ಟರ್ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ನಟಾಲ್ ಇಂಡಿಯನ್ ಕಾಂಗ್ರೆಸ್ ಪ್ರಾರಂಭಿಸಿದರು. ಶ್ವೇತವರ್ಣೀಯ ಆಡಳಿತ ಕೂಟ ಕಪ್ಪುವರ್ಣೀಯ ಜನಾಂಗಗಳ ಬಗ್ಗೆ ತಿರ ಸ್ಕಾರದಿಂದ ಸಾಮಾನ್ಯ ನಾಗರೀಕ ಹಕ್ಕುಗಳನ್ನೂ ನೀಡದೇ ಹೋದಾಗ ನಾಗರಿಕರು ಪ್ರತಿಭಟಿಸಲು ಅದು ಸಾರ್ವಜನಿಕ ವೇದಿಕೆಯಾಗಿತ್ತು. ಸೌಜನ್ಯಪೂರ್ಣ ಮನವಿ ಗಳನ್ನೂ, ನೀತಿನಿಷ್ಠ ಪ್ರಜಾಭಿಪ್ರಾಯದ ಒತ್ತಡವನ್ನೂ, ನಿಷ್ಕ್ರಿಯ ಪ್ರತಿ ಭಟನಾ ಪ್ರಕಟಣೆಗಳನ್ನೂ ಆಳರಸರು ಅಹಂಕಾರದಿಂದ ನಿರಾಕರಿಸಿದ್ದರು. ಏಷ್ಯಾದಿಂದ ಬಂದ ಎಲ್ಲ ರೀತಿಯ ದುಡಿಮೆಗಾರ ಜನಾಂಗಗಳೂ ದಬ್ಬಾಳಿಕೆಗೆ ತುತ್ತಾಗಿದ್ದರು. ಅಲ್ಲಿನ ಜನತೆ ಬ್ರಿಟಿಷ್ ಚಕ್ರಾಧಿಪತ್ಯದ ಪ್ರಜೆಗಳಾಗಿದ್ದರೂ ಏಷ್ಯನ್ನರಿಗೆ ಅದರಲ್ಲೂ ಹೆಚ್ಚಾಗಿ ಭಾರತೀಯರಿಗೆ ಅವಮಾನಕರ ಕಾನೂನುಗಳು ಜಾರಿಯಲ್ಲಿದ್ದವು. ಅವುಗಳನ್ನು ರದ್ದುಪಡಿಸಿ ನಾಗರಿಕರಿಗೆ ಸಮಾನ ಹಕ್ಕು ಗಳನ್ನು ಪಡೆದು ಜೀವಿಸಲು ಹೋರಾಟದ ಅಸ್ತ್ರವಾಗಿ ನೈತಿಕ ಸಂಘಟನಾ ಪ್ರತಿ ಭಟನೆ ಗಾಂಧೀಜಿಯ ನಾಯಕತ್ವದಲ್ಲಿ ಪ್ರಾರಂಭವಾಯಿತು. ಈ ಹಿಂದೆ ಯುರೋಪಿ ನಲ್ಲಿ ನಾಗರಿಕರು ನಡೆಸುತ್ತಿದ್ದ ನಿಷ್ಕ್ರಿಯ ಸಾತ್ವಿಕ ಪ್ರತಿಭಟನೆ (ಪ್ಯಾಸಿವ್ ರೆಸಿ

ಸ್ಟೆನ್ಸ್) ಮಾದರಿಯಲ್ಲಿತ್ತು. ಗಾಂಧೀಜಿಯ ಪ್ರಯೋಗಗಳಿಂದ ಅದು ಅಹಿಂಸಾತ್ಮಕ ಸತ್ಯಾಗ್ರಹ ಪ್ರಭಾವಶಾಲಿ ಎಂಬ ಮಾರ್ಗ ವಾಗಿ ಪರಿವರ್ತಿತವಾಯಿತು. ೧೯೦೮ ರಲ್ಲಿ ಈ ಹೋರಾಟದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಗಾಂಧೀಜಿ ಸತ್ಯಾಗ್ರಹ ಜೀವನವನ್ನು ಪ್ರಯೋಗ ವಾಗಿ ಕೈಗೊಂಡರು. ಆಗ ಸ್ವಾತಂತ್ರ್ಯದ ಗುರಿಯಾಗಲೀ ವಿದೇಶಿದಾಸ್ಯ ವಿಮೋ ಚನೆಯಾಗಲೀ ಅವರ ಗಮನದಲ್ಲಿರಲಿಲ್ಲ. ಭಾರತದಲ್ಲಿ ಗೋಖಲೆ, ತಿಲಕ್ ಅವರ ನೇತೃತ್ವದಲ್ಲಿನ "ಹೋಂ ರೂಲ್" ಚಳುವಳಿಯಲ್ಲಿ ಗಾಂಧೀಜಿಗೆ ಆಸಕ್ತಿ ಹುಟ್ಟಿತು. ಭಾರತಕ್ಕೆ ಹಿಂತಿರುಗಿದೊಡನೆ ತಮ್ಮ ಸತ್ಯಾಗ್ರಹ ಆಶ್ರಮವನ್ನು ೧೯೧೫ ರಲ್ಲಿ ಅಹಮದಾಬಾದಿನಲ್ಲಿ ಪ್ರಾರಂಭಿಸಿದರು. ಅವರ ಸತ್ಯಸಂಶೋಧನಾ ಪ್ರಯೋಗದ ಜೀವನ ಮಾರ್ಗ ಜೀವನದ ಸಮಸ್ತ ಕ್ಷೇತ್ರಗಳನ್ನೂ ಆವರಿಸಿ ನಿಂತು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೊಂದು ನೂತನ ತಿರುವು ಕೊಟ್ಟಿತು. ತಿಲಕರ ನಂತರ ಅಖಂಡಭಾರತದ ಐಕ್ಯತೆಯನ್ನು ಸಾಧಿಸಿತು. ಪೂರ್ಣಸ್ವಾತಂತ್ರ್ಯದ ಸಮಗ್ರ ದೃಷ್ಟಿಯಿಂದ ಅಹಿಂಸಾತ್ಮಕ ಅಸಹಕಾರದ ಆಂದೋಲನವನ್ನು ಗಾಂಧೀಜಿ ವಿಜಯದ ಶಿಖರಕ್ಕೆ ಕೊಂಡೊಯ್ದರು. ಸತ್ಯಾಗ್ರಹದ ವಿವಿಧ ಮುಖಗಳು ಸಂಶೋಧಿತವಾದವು. ಕಟಿಬದ್ಧವೂ ವೈಜ್ಞಾನಿಕವೂ ಆದ ಶಾಸ್ತ್ರದ ರೂಪರೇಖೆ ಗಳು ಸ್ಫುಟವಾಗಿ ಮೂಡಿಬಂದವು. ನಿಶ್ಶಸ್ತ್ರ ಜನಕೋಟಿಯ ಭಾವಪೂರ್ಣ ನೈತಿಕ ಶಕ್ತಿಗಳನ್ನು ಸಂಘಟಿಸಿ, ಶಿಕ್ಷಣ ನೀಡಿ, ಭಾರತದ ವಿದೇಶಿ ದಾಸ್ಯ ವಿಮೋ ಚನೆಗಾಗಿ ಸ್ವಾತಂತ್ರ್ಯಯೋಧರ ಅತ್ಯಾಗಾಧ ಸಂಖ್ಯೆಯನ್ನು ನಿರ್ಮಿಸಿದ ಪವಾಡ ಗಾಂಧೀಜಿಯ ನಿಸ್ಸೀಮ ದಾಖಲೆಯೆನಿಸಿತ್ತು. ಜಗತ್ತು ಆವರೆವಿಗೆ ಎಂದೂ ಕಂಡರಿಯದ ಸಮರ ಪ್ರಕ್ರಿಯೆ ಕ್ರಮೇಣ ಅನಾವರಣವಾಗುತ್ತಾ ಸಾಗಿ ಸತ್ಯಾಗ್ರಹ ಎಂದರೆ ಕೇವಲ ಯುದ್ಧತಂತ್ರವಲ್ಲ ಎಲ್ಲ ಅನ್ಯಾಯಗಳನ್ನೂ ಪ್ರಜ್ಞಾಪೂರ್ವಕವಾಗಿ ಅಹಿಂಸಾಮಾರ್ಗದಿಂದ ಸರಿಪಡಿಸಿಕೊಳ್ಳುವ ಏಕೈಕ ರಾಜ ಮಾರ್ಗ ಎಂದೇ ಪ್ರಖ್ಯಾತವಾಯಿತು. ಗಾಂಧೀಜಿಯ ಮಾತುಗಳಲ್ಲಿ "ಸತ್ಯಾಗ್ರಹ ಅಂದರೆ ಸತ್ಯಕ್ಕಾಗಿ ಅಪ್ರತಿಹತ ಅನ್ವೇಷಣೆ ಮತ್ತು ಸತ್ಯಸಾಕ್ಷಾತ್ಕಾರಕ್ಕಾಗಿ ದೃಢಸಂಕಲ್ಪ ಸಾಧನೆ" ಯಾವ ಪ್ರತಿ ಹಿಂಸೆಗೂ ಎಡೆಕೊಡದ ಕಾಯಾವಾಚಾ ಮನಸಾ ಅಹಿಂಸಾ ವ್ರತವನ್ನು ಅಂಗೀಕರಿಸುವುದು.

-೪-

ಸ್ವರಾಜ್ಯ, ಸ್ವದೇಶೀ ಮತ್ತು ಸತ್ಯಾಗ್ರಹ ಒಂದು ಪೂರ್ಣದೃಷ್ಟಿಯ ಮೌಲ್ಯಾಧಾರಿತ ಜೀವನಕ್ರಮದ ಆಧಾರಸ್ತಂಭಗಳು. ಗಾಂಧೀಜಿ ಈ ತತ್ವನಿಷ್ಠ ಅಧ್ಯಾತ್ಮ ವಿಕಾಸ ಪ್ರಧಾನವಾದ ಜೀವನಕ್ರಮದ ಆದ್ಯ ಪ್ರವರ್ತಕರು. ಅವರ

ಬಾಳು-ನಡೆ-ನುಡಿ ಮತ್ತು ಪ್ರಯೋಗಗಳು ನಾಳಿನ ಜಗತ್ತಿಗೆ ಜೀವನ ಸಾರ್ಥಕ್ಯ ದೀಪಿಕೆಗಳಾಗಿ ನಿಲ್ಲುತ್ತವೆ. ಅವರು ನುಡಿದಿರುವಂತೆ ಆತ್ಮಶ್ರೀ ನಿಯಮಕ್ಕೆ ತನ್ನದೇ ಆದ ಪ್ರತ್ಯೇಕ ಕ್ಷೇತ್ರವಿದೆ ಎಂಬುದನ್ನು ನಾನು ನಂಬುವುದಿಲ್ಲ. ಅದು ಜೀವನದ ಸಾಮಾನ್ಯ ವ್ಯವಹಾರಗಳ ಮೂಲಕವಾಗಿ ಮಾತ್ರವೇ ಪ್ರಕಟಗೊಳ್ಳುತ್ತಿರುತ್ತದೆ. ಹೀಗೆ ಅದು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಲಯಗಳಲ್ಲೂ ಅತ್ಯಂತ ಪ್ರಭಾವಯುತ ಪರಿಣಾಮಗಳನ್ನು ಉಂಟುಮಾಡುತ್ತದೆ." ಮಾನವನ ಮನಸ್ಸಾಗಲೀ, ಸಮಾಜವಾಗಲೀ ರಾಜಕೀಯ, ಸಾಮಾಜಿಕ, ಧಾರ್ಮಿಕ ಸಾಂಸ್ಕೃತಿಕ ಎಂಬ ಪ್ರತ್ಯೇಕವಾದ ಒಂದಕ್ಕೊಂದು ಸಂಪೂರ್ಣ ಸ್ವತಂತ್ರ ವಾದ ವಿಭಾಗಗಳಾಗಿ ವಿಂಗಡಿತವಾಗಿರುವುದಿಲ್ಲ. ಅವುಗಳ ನಡುವೆ ಕ್ರಿಯೆ ಪ್ರತಿ ಕ್ರಿಯೆಗಳು ಸತತವಾಗಿ ನಡದೇ ಇರುತ್ತವೆ. ಸಾಮಾಜಿಕ ಮತ್ತು ನೈತಿಕ ದೃಷ್ಟಿ ಯಿಂದಲೇ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಪರಿಶೋಧಿಸಿ ಪರಿ ಹಾರಗಳನ್ನು ಕಂಡುಕೊಳ್ಳಬೇಕು. ಯಾವುದನ್ನು ಈಗ 'ಹ್ಯೂಮನ್ ಡೆವಲಪ್ ಮೆಂಟ್', ಇಂಟಿಗ್ರೇಟೆಡ್ ಡೆವಲಪ್‌ಮೆಂಟ್' 'ನ್ಯಾಚುರಲ್ ಈಕಲಾಜಿಕಲ್ ಬ್ಯಾಲೆನ್ಸ್' ಎಂದೆಲ್ಲಾ ತಜ್ಞರು ವಿವರಿಸುತ್ತಿರುವರೋ ಅದರ ಮೂಲ ಸಿದ್ಧಾಂತಗಳಲ್ಲಿ ಮಾನವ ಸಮಾಜದ ಮೌಲ್ಯ ಪರಿವರ್ತನೆ ಇಂಗಿತ ವಾಗಿರುತ್ತದೆ, ಗಾಂಧೀಜಿಯ ಚಿಂತನಾ ಕ್ರಮದಲ್ಲಿ ಸ್ವರಾಜ್ಯ, ಸ್ವದೇಶಿ ಮತ್ತು ಸತ್ಯಾಗ್ರಹದಲ್ಲಿ ಒಂದು ಪೂರ್ಣದೃಷ್ಟಿಯ ಜೀವನ ಪರಿವರ್ತನಾ ಕ್ರಮದ ತತ್ವದೃಷ್ಟಿ ಅಂತರ್ಗತವಾಗಿದೆ. ಜೀವಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸಿ ಕಟ್ಟಕಡೆಯವನಿಗೆ ನ್ಯಾಯನಿಷ್ಠೆಯಿರುವ ಸಮಾಜ ವ್ಯವಸ್ಥೆ ಇಲ್ಲದೆ ನಮ್ಮ ಜಗತ್ತು ಶಾಂತಿ, ನೆಮ್ಮದಿ ಮತ್ತು ವಿಶ್ವಭ್ರಾತೃತ್ವಗಳನ್ನು ಸಾಧಿಸ ಲಾರದು ಎಂದು ಸರ್ವೋದಯ ಜೀವನವಿಧಾನದ ಪ್ರಯೋಗಗಳನ್ನು ಗಾಂಧೀಜಿ ಕೈಗೊಂಡು ಮಾರ್ಗದರ್ಶನ ಮಾಡಿದ್ದಾರೆ. ಆದ್ದರಿಂದಲೇ ಅವರು ಸತ್ಯಾಗ್ರಹ ವನ್ನು ವಿಕಾಸಶೀಲ ವಿಜ್ಞಾನ ಎಂದು ಕರೆದಿದ್ದಾರೆ.

ಸತ್ಯ ಅಹಿಂಸೆಗಳನ್ನು ಕೇವಲ ಅನುಷ್ಠಾನ ತತ್ವಗಳನ್ನಾಗಿ ಮಾಡಿಕೊಂಡರೆ ಸಾಲದು: ಸಾಮಾನ್ಯ ಜನ, ಸಮಾಜ ಸಮುದಾಯಗಳೂ, ರಾಷ್ಟ್ರಗಳೂ ಅವು ಗಳನ್ನು ದಿನನಿತ್ಯದ ಬಾಳಿಗೆ ಅನ್ವಯಿಸಿ ಅನುಷ್ಠಾನ ಮಾಡುವಂತಾಗಬೇಕು. ಗಾಂಧೀಜಿಯ ಬದುಕೆಲ್ಲ ಈ ಸತ್ಯಸಾಕ್ಷಾತ್ಕಾರದ ಪ್ರಯತ್ನಕ್ಕಾಗಿಯೇ ಸಾಗಿತು. ಅವರ ಶ್ರದ್ಧೆ ದಿನದಿನಕ್ಕೂ ಹೊಚ್ಚ ಹೊಸ ದರ್ಶನಗಳನ್ನು ನೀಡುತ್ತಾ ಮುನ್ನಡೆಸಿತು. ಆತ್ಮದ ಸ್ವರೂಪವೇ ಅಹಿಂಸೆ. ಬದುಕಿರುವುದೇ ಅದರಿಂದ.

೨೫ನೇ ಪುಟ ನೋಡಿ

ವೈಚಾರಿಕ ಧಾರಾವಾಹಿ...... ...

ನಾಗರಿಕರ ಪರಸ್ಪರ ಸಂಬಂಧದಲ್ಲಿ ರಾಜ್ಯದ ಹಸ್ತಕ್ಷೇಪ ಕಡಿಮೆ ಇರಬೇಕು.

– ದಾದಾ ಧರ್ಮಾಧಿಕಾರಿ

(ದಾದಾ ಧರ್ಮಾಧಿಕಾರಿ ಭಾರತದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಜೀವನವನ್ನು ವಸ್ತುನಿಷ್ಠೆಯ ದೃಷ್ಟಿಯಿಂದ ನೋಡಿದರು. ಅವರ ಶತಮಾನೋತ್ಸವದ ಸಂದರ್ಭವನ್ನು ಉಪಯೋಗಿಸಿಕೊಂಡು ಓದುಗರಿಗೆ ಅವರ ವಿಚಾರಪೂರ್ಣ ಅನುಭವದ ಮಾತುಗಳನ್ನು ಇಲ್ಲಿ ಕ್ರಮಶಃ ಕೊಡಲಾಗುತ್ತಿದೆ. ಇದು ಏಳನೇಯ ಸರಣಿ .–ಸಂ)

ಸತ್ಯನಿಷ್ಠ ಮನುಷ್ಯ ಪ್ರಾಮಾಣಿಕ, ನಿಷ್ಪಕ್ಷ ಆಗಬೇಕು. ಅವನಿಗೆ ಅವಾಂತರ ಪ್ರೇರಣೆ, ಬೇಕಿಲ್ಲ. ಹಾಗಾದರೆ ಏನು ಪ್ರೇರಣೆ? ಸಮಾಜವಾದ ಸಾಮ್ಯವಾದಗಳು ಸಾಮಾಜಿಕ ಪ್ರೇರಣೆ, ಎನ್ನುತ್ತೇವೆ. ಈ ಸಾಮಾಜಿಕತೆಯ ಪ್ರೇರಣೆ ಏನು? ಎಲ್ಲಿಂದ ಬಂತು? ನರಕಭಯ ಇಲ್ಲವೆ ಸ್ವರ್ಗದಾಸೆ ಎಂದು ಹೇಳಿತ್ತು ಧರ್ಮ. ಏನು ದುರ್ಭಾಗ್ಯವೋ! ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರದ ಪ್ರೇರಣೆಗಳೆಲ್ಲವೂ ಭೌತಿಕ ಪ್ರೇರಣೆಗಳೇ. ಪುಣ್ಯಕಾರ್ಯ ಮಾಡು, ಪ್ರಾಮಾಣಿಕನಾಗಿ ಬಾಳು, ಜನರಿಗೆ ಕೆಡುಕನ್ನು ಮಾಡಬೇಡ. ಕೊಲಬೇಡ, ಕಳಬೇಡ. ಇದರ ಫಲ? ನಿನಗೆ ಸುಖ ಸಿಗುತ್ತದೆ. ಏನು ಸುಖ? ಅಮೃತ, ಅಪ್ಸರೆ. ಇದು ಆಧ್ಯಾತ್ಮಿಕತೆಯಂತೆ. ಧರ್ಮಕ್ಷೇತ್ರದಲ್ಲಿ ಹೇಳಿದ ಕರ್ಮಫಲ ಎಲ್ಲವೂ ಭೌತಿಕ ಉಪಭೋಗದ್ದು. ಕೆಟ್ಟಕೆಲಸ ಮಾಡಿದರೆ ಯಮರಾಯ ಇದ್ದಾನೆ. ಕಡಾಯಿಯಲ್ಲಿ ಕುದಿಸುತ್ತಾನೆ, ಸೂಜಿಯ ಮೇಲೆ ನಿಲ್ಲಿಸುತ್ತಾನೆ, ಇತ್ಯಾದಿ. ನರಕದ ಸಂಕಟ, ಸ್ವರ್ಗದ ಸುಖ ಎಲ್ಲವೂ ಶಾರೀರಿಕ. ಆತ್ಮಕ್ಕೆ ಸಂಬಂಧಿಸಿದ್ದಲ್ಲ. ಧಾರ್ಮಿಕ ಪ್ರೇರಣೆ ಹೀಗೆ ಶಾರೀರಿಕ, ಭೌತಿಕ ಪ್ರೇರಣೆ ಆಯಿತು. ವಸ್ತುನಿಷ್ಠೆಯದೂ ಅಲ್ಲ, ಸತ್ಯನಿಷ್ಠೆಯದೂ ಅಲ್ಲ. ವಿಜ್ಞಾನಿಗಳು ಭಯ – ಲೋಭಗಳ ಪ್ರೇರಣೆಯಿಂದ ಕೆಲಸಮಾಡಿದರೆ? ನಮ್ಮ ನಮ್ಮ ಪಕ್ಷದಲ್ಲಿ ಕೆಲಸಮಾಡಿ, ಇಷ್ಟಿಷ್ಟು ಹಣ ಕೊಡುತ್ತೇವೆ ಎಂದು ವಿಜ್ಞಾನಿಗಳಿಗೆ ಹೇಳುತ್ತಾರೆ ಮುಖಂಡರು. ನಮ್ಮ ಪರವಾಗಿ ನಿರ್ಣಯ ಕೊಡಿ, ನಿಮಗೆ ಎರಡು ಲಕ್ಷ ರೂಪಾಯಿ ಕೊಡುತ್ತೇವೆ ಎನ್ನುತ್ತಾರಂತೆ ಡಾಲ್ಡಾ ಕಂಪೆನಿಯವರು ವಿಜ್ಞಾನಿಗಳಿಗೆ. ಅಂಥಲ್ಲಿ ವಿಜ್ಞಾನಿ ಭ್ರಷ್ಟ ಆಗುತ್ತಾನೆ. ವಿಜ್ಞಾನಿ ಭ್ರಷ್ಟನಾದರೆ ವಿಜ್ಞಾನ ನಾಶವಾಗುತ್ತದೆ. ವಿಜ್ಞಾನದಲ್ಲೂ ಭಯ–ಲೋಭಗಳ ಪ್ರೇರಣೆ ಕೂಡದು. ವಿಜ್ಞಾನದಲ್ಲಿ ಕೂಡದು ಎಂದಮೇಲೆ ನೈತಿಕ ಆಚರಣೆಯಲ್ಲಂತೂ ಕೂಡಲೇ ಕೂಡದು. ದಂಡ ಮತ್ತು ಪ್ರಲೋಭನಗಳ ಪ್ರೇರಣೆ

ಕೂಡದು ಎಂದು ಎಲ್ಲ ಕ್ರಾಂತಿಕಾರಿಗಳದೂ ಸಂಕಲ್ಪ. ಹಾಗಾದರೆ ಸಮಾಜ ವಾದ, ಸಾಮ್ಯವಾದ ಮಿಥ್ಯೆ ಎನ್ನಲಿಲ್ಲ, ತಪ್ಪು ಎನ್ನಲಿಲ್ಲ, ಅಪೂರ್ಣ ಎಂದರು, ಜಯಪ್ರಕಾಶರು ಇದು ಬೇಡ ಎಂದರೆ ಯಾವುದು ಪ್ರೇರಣೆ? ಸಾಮಾಜಿಕತೆಯು ಪ್ರೇರಣೆ, ಆವಾಂತರ ಪ್ರೇರಣೆಯಲ್ಲ, ಹೊರಗಿನದಲ್ಲ. ಹಾಗಾದರೆ ಎಲ್ಲಿಂದ ಬರಬೇಕು? ಇದಕ್ಕೆ ಉತ್ತರ ಸರ್ವೋದಯ ಹೇಳುತ್ತದೆ, ಗಾಂಧಿ ಹೇಳು ತ್ತಾರೆ. ಈ ಸಾಮಾಜಿಕ ಪ್ರೇರಣೆ ಮೂಲಭೂತ ಪ್ರೇರಣೆಯಾಗಬೇಕು. ಸಾಮಾಜಿಕತೆ ಮನುಷ್ಯನ ಸ್ವಭಾವ ಎನ್ನುತ್ತಾರೆ ಗಾಂಧೀ. ಲೋಭ - ಭಯ ಗಳ ಪ್ರೇರಣೆ ಕೃತ್ರಿಮ. ಇದನ್ನು ಸರಿಸಿಬಿಡಿ. ಸಾಮಾಜಿಕತೆ ಮನುಷ್ಯನ ಸ್ವಭಾವವಾಗುತ್ತದೆ. ಮನುಷ್ಯ ಸ್ವಭಾವ ಸ್ನೇಹಶೀಲ. ಮನುಷ್ಯ ಸಹವಾಸ ಪರಾಯಣ, ಸಂಗತಿಪ್ರಿಯ. ಇತರರೊಡನೆ ಇರಬಯಸುತ್ತಾನೆ.

ನೀವು ಸೈಕಲ್ ಮೇಲೆ ಬರುತ್ತಿದೀರಿ. ನಾನು ದಾರಿಯಲ್ಲಿ ಬರುತ್ತಿದೇನೆ. ಢಿಕ್ಕಿ ಹೊಡೆದಿರಿ. ನಾನು ಬಿದ್ದೆ, ಪೆಟ್ಟಾಯಿತು, ನೆತ್ತರು ಬಂತು. ನಾನು ಎದ್ದು ನಿಮ್ಮನ್ನು ಹೊಡೆದೇನು ಅಥವಾ ಪೋಲೀಸರನ್ನು ಕರೆದೇನು ಎಂಬ ಭಯ ನಿಮಗೆ ಇಲ್ಲದಿದ್ದರೆ, ನಿಮಗೆ ದುಃಖ ಆಗುತ್ತದೆ. ಎಂಥಾ ದುಷ್ಟಾತಿ ದುಷ್ಟನಾದರೂ ಮನಸ್ಸಿನಲ್ಲಿ ದುಃಖ ಆಗುತ್ತದೆ. ಏಕೆ? ನೀವು ಇದಕ್ಕೆ ಜವಾಬದಾರರು ಎಂದು ನಿಮಗೆ ತಿಳಿಯಿತು. ಶಿಕ್ಷೆ ತಪ್ಪಿಸಿಕೊಳ್ಳಲು ಯುಕ್ತಿ ಹೂಡಬಹುದು. ಮನಸ್ಸಿಗೆ ಏನು ಹೇಳಬಲ್ಲಿರಿ? ಅದನ್ನು ತಪ್ಪಿಸಲು ಸಾಧ್ಯ ವಿಲ್ಲ. ಒಂದುವೇಳೆ ನಾನು ಸರಿಯಾಗಿಯೆ ಬಂದೆ, ಈ ಮುದುಕ ಅಡ್ಡಬಂದ ಎಂದರೂ ಮನಸ್ಸು ಒಪ್ಪದು. ನಿನ್ನದು ಜವಾಬದಾರಿ ಎನ್ನುತ್ತದೆ. ಚಿತ್ತಕ್ಕೆ ತರ್ಕ ಹೇಳಬಹುದು. ವ್ಯಥೆಯೇನೋ ಹೋಗದು. ಇದು ಸ್ವಾಭಾವಿಕ. ಇದು ಎಲ್ಲಿ ಮಲಿನವೋ ಅಲ್ಲಿ ಕುಸಂಸ್ಕಾರವಾಗಿದೆ. ಸಮಾಜದ ಕೆಟ್ಟ ಸಂಸ್ಕಾರಗಳಿಂದ ಸ್ವಭಾವ ಮಲಿನವಾಗುತ್ತದೆ.

ಬೆಂಗಳೂರಿನಲ್ಲೆಲ್ಲ ದುಷ್ಟರೊಳಗೆ ದುಷ್ಟ ಎಂದು ಹೆಸರಾದ ಮನುಷ್ಯ ರನ್ನು ಜೊತೆಯಲ್ಲಿ ಸಿನಿಮಾಕ್ಕೆ ಕರೆದೊಯ್ಯಿರಿ. ಹಳೆಯದರಲ್ಲಿ ಹಳೆಯ ಸಿನಿಮಾ – ಹರಿಶ್ಚಂದ್ರ ಚಿತ್ರಕ್ಕೆ ಒಯ್ಯಿರಿ. ಚಂದ್ರಮತಿಯನ್ನು ಪೇಟೆಯಲ್ಲಿ ಮಾರಾಲು ಬಂದಾಗ ಪಕ್ಕದಲ್ಲಿ ಕೂತ ಅವನ ಮುಖವನ್ನು ನೋಡಿ. ಆ ದುರ್ಜನನೂ ಅಳುತ್ತ ಇದಾನೆ. ದುಷ್ಟನೂ ಅಳಬೇಕೆ? ಹೊರಗಡೆ ಅವನ ಮನೋವೃತ್ತಿ ಮಲಿನವಾಗಿತ್ತು. ಇಲ್ಲಿ ಅವನ ಸ್ವಾಭಾವಿಕ ವೃತ್ತಿ ಹೊರ ಹೊರಹೊಮ್ಮಿತು. ಅಡ್ಡಿ ಇಲ್ಲದಿದ್ದರೆ ಪ್ರಕಟವಾಗುತ್ತದೆ. ತೀರಾ ಒರಟು ಜನ, ನಿಕೃಷ್ಟ ನೀಚ ಎಂದು ನೀವು ತಿಳಿದವರು, ಸಿನಿಮಾದಲ್ಲಿ ಕೂತಾಗ

ನೋಡಿ. ಹರಿಶ್ಚಂದ್ರ ಗೆದ್ದು ವಿಶ್ವಾಮಿತ್ರ ಸೋತಾಗ ಅವರು ಚಪ್ಪಾಳೆ ತಟ್ಟುತ್ತಾರೆ. ಅವರ ಸೂಕ್ಷ್ಮ ಕೋಮಲಭಾವನೆ ಕ್ಷೀಣವಾಗಿದೆ. ಆದರೂ ಚಪ್ಪಾಳೆ ತಟ್ಟುತ್ತಾರೆ. ಇದು ಮನುಷ್ಯನ ಸ್ವಭಾವ, ಅವನ ಮನುಷ್ಯತ್ವ. ಆದ್ದರಿಂದ ಪ್ರೇರಣೆಯನ್ನು ಹೊರಗಡೆ ಹುಡುಕಬೇಡಿ. ಕುಸಂಸ್ಕಾರಗಳಿಂದ ಮಿಥ್ಯಾ ಪ್ರೇರಣೆ, ಕೃತ್ರಿಮ ಪ್ರೇರಣೆ, ದುಷ್ಟ ಪ್ರೇರಣೆ ಬಂದಿವೆ. ಅವನ್ನು ನಿವಾರಣೆ ಮಾಡಿ. ಅದಕ್ಕೆ ಉಪಾಯ ಹುಡುಕಿ. ಈ ಕೃತ್ರಿಮ ಪ್ರೇರಣೆಗಳಿಗೆ ಅವಕಾಶವಿಲ್ಲದ ಸಮಾಜವನ್ನು ಕಟ್ಟಿ.

ಈ ಪ್ರೇರಣೆಗಳಿಂದ ಹುಟ್ಟಿಬಂದ ಮೂರು ಸಂಸ್ಥೆಗಳನ್ನು ಪ್ರತೀಕಾತ್ಮಕವಾಗಿ ಹೇಳಿದೆ: ನ್ಯಾಯಾಲಯ, ಪೋಲಿಸು, ಜೈಲು. ಇವು ಮೂರೂ ಏಕೆ ಇವೆ? ನೀವು ಮಾಡಿದ ಕೆಟ್ಟ ಕೆಲಸಕ್ಕೆ ಶಿಕ್ಷೆ ಕೊಡಲಿಕ್ಕೆ. ಒಳ್ಳೆಯ ಕೆಲಸ ಮಾಡಿದರೆ ಬಹುಮಾನ ಕೊಡುವ ಸಂಸ್ಥೆಯೂ ಇವೆ. ಈಗ ಅವನ್ನು ಪ್ರಸ್ತಾಪಿಸುವುದಿಲ್ಲ. ಈ ಮೂರು ನಾಗರಿಕ ಸಂಸ್ಥೆಗಳು ಸಭ್ಯ ಸಮಾಜದ ಲಕ್ಷಣ ಏನು ಹೇಳಿ? ಏನು ಕುರುಹು? ಈ ಸಂಸ್ಥೆಗಳ ಉಪಯೋಗ ಎಲ್ಲಿ ಅಧಿಕಾಧಿಕವೋ ಅದು ಸಭ್ಯ ಸಮಾಜವೆ? ನಮ್ಮ ಜೈಲಿನಲ್ಲಿ ಸಂಖ್ಯೆ ಹೆಚ್ಚಾದರೆ ಸಂತೋಷವೆ? ಜನ ಅಂಜಿಯಾರು. ಅದು ಕುಸಂಸ್ಕಾರ. ಬೆಂಗಳೂರಿನ ಜೈಲಿಗಿಂತ ನಮ್ಮ ನಾಗಪುರದ ಜೈಲು ದೊಡ್ಡದು. ಇಲ್ಲಿ ೧,೦೦೦ ಎಂದರೆ ಇದೇನು ಗೌರವದ ಮಾತೇ? ಈ ಮೂರು ಸಾವಿರದಲ್ಲಿ ನೀವು ಇಲ್ಲವಲ್ಲ? ಛೆ, ಕೈದಿಗಳ ಗುಂಪಿನಲ್ಲಿ ನಾನೆ? ಸರಿ, ನೀವು ಅಲ್ಲಿರಬಾರದು ಎಂದರೆ ಯಾರೂ ಇರಬಾರದು. ಯಾರು ತಾನೆ ಅಲ್ಲಿರಬೇಕು? ಪೋಲೀಸರು ಇರಬೇಕು. ಆದರೆ ಅವರ ಸಂಬಂಧ ನಮಗೆ ಬೇಡ. ಮನೆಯಲ್ಲಿ ಕಳ್ಳತನ ಆದರೆ ನೀವು ಪೋಲೀಸರ ಬಳಿಗೆ ಹೋಗುತ್ತೀರಿ. ಆದರೆ ಕಳವು ಆಗಬಾರದಾಗಿತ್ತು ಎಂದು ನಿಮ್ಮ ಮನಸ್ಸು. ಪೋಲೀಸರಿಂದ ಕೆಲಸ ಬಿದ್ದಾಗಲೂ ಈ ಪ್ರಸಂಗ ಬಾರದಿದ್ದರೆ ಚೆನ್ನಾಗಿತ್ತು ಎಂದೇ ನಿಮ್ಮ ಮನಸ್ಸು. ನಾಗಪುರದ ಹೈ ಕೋರ್ಟಿನಲ್ಲಿ ಒಂದು ಬೆಂಚನ್ನು ಕಡಿಮೆ ಮಾಡಿದರು. ಅದಕ್ಕೆ ಜಗಳ. ನಮಗೆ ಒಂದೇ ಬೆಂಚೆ? ಒಂದು ಬೆಂಚಿನಲ್ಲಿ ನಾಲ್ಕು ಐದು ನ್ಯಾಯಾಧೀಶರು ಇದ್ದಾರು. ಬೊಂಬಾಯಿಯಲ್ಲಿ ಹತ್ತು – ಹದಿನೈದು ಜನವೆ? ಹೀಗೇಕೆ ಎಂದು ಜಗಳ. ಇದೂ ಒಂದು ಗೌರವದ ವಿಷಯ! ನಿಮ್ಮಲ್ಲಿ ಎಷ್ಟು? ಐವತ್ತು ಮಂದಿ ನ್ಯಾಯಾಧೀಶರು, ಆದರೆ ಬಹಳ ಹೆಚ್ಚು ಗೌರವದ ಮಾತಾಯಿತು. ಕೋರ್ಟುಬಾಜಿ ಕಾನೂನುಬಾಜಿಗೂ ನಾಗರಿಕತೆಗೂ ಬಹು ವಿರೋಧ. ಇದು ನಾಗರಿಕತೆಯಲ್ಲ. ಇದು ಬೇಡ. ಶಾಂತಿಪರಾಯಣ, ನಿಯಮಪಾಲಕ ನಾಗರಿಕ ಬೇಕು. ಆದರೆ ೫೦ ಮಂದಿ ನ್ಯಾಯಾಧೀಶರು

ಎಂಬ ಹೆಮ್ಮೆ ನಮಗೆ. ನಾವು ಮಾತ್ರ ನ್ಯಾಯಾಲಯದ ಮೆಟ್ಟಿಲು ತುಳಿಯ ಬಾರದು. ಪೋಲೀಸು ಬೇಕು, ಜೈಲು ಬೇಕು, ಕೋರ್ಟು ಬೇಕು. ನಮಗೆ ಮಾತ್ರ ಯಾವ ಒಂದರ ಸಂಬಂಧವೂ ಬೇಡ. ನಮಗೆ ಬೇಡದ್ದು ಇನ್ನೊಬ್ಬ ರಿಗೆ ಏಕೆ?

ಈಗ ಗಾಳಿ ತಿರುಗಿದೆ. ಈ ಸಂಸ್ಥೆಗಳಿಗಾಗಿ ಬಹಳ ಕಡಮೆ ವೆಚ್ಚಮಾಡಿ ಎಂದು ಹೇಳುತ್ತಿದೇವೆ. ಕಾಂಗ್ರೆಸಿನಿಂದ ಹಿಡಿದು ಕಮ್ಯೂನಿಸ್ಟರವರೆಗೆ ಎಲ್ಲಾ ಪಕ್ಷಗಳದೂ ಒಂದೇ ಬೇಡಿಕೆ. ಶಿಕ್ಷಣಕ್ಕೆ ಹೆಚ್ಚು ವೆಚ್ಚವಾಗಲಿ. ಜೈಲಿನ ವೆಚ್ಚ ವನ್ನು ಕಡಿಮೆ ಮಾಡಿ. ಅನ್ನ, ವಸ್ತ್ರ, ಉದ್ಯೋಗಗಳಿಗೆ ಹೆಚ್ಚು ವೆಚ್ಚಮಾಡಿ. ಪೋಲೀಸು ಶಾಖೆಗೆ, ನ್ಯಾಯಾಲಯಕ್ಕೆ ವೆಚ್ಚ ಕಡಮೆ ಮಾಡಿ. ಹೀಗೆ ಕೇಳು ತ್ತಿಲ್ಲವೆ? ರಾಷ್ಟ್ರನಿರ್ಮಾಣದ ಕೆಲಸಗಳಿಗೆ ಹೆಚ್ಚು ವೆಚ್ಚಮಾಡಿ ಎನ್ನುತ್ತಾರೆ. ಈಗ ಚೀನಾದ ಭಯಕ್ಕೆ ದಂಡಿಗೆ ಹೆಚ್ಚು ಹಣ ಕೊಡಿ ಎನ್ನುತ್ತೇವೆ. ಸಾಮಾನ್ಯ ವಾಗಿ ಸೇನೆಯ ವೆಚ್ಚ ತಗ್ಗ ಬೇಕೆಂದೇ ಎಲ್ಲರೂ ಕೇಳುವುದು. ಈ ಸಂಕೇತದ ಅರ್ಥ ಈ ಸಂಸ್ಥೆಗಳ ಉಪಯೋಗವನ್ನು ತಗ್ಗಿಸೋಣ ಎಂದು. ದಂಡದ ಅಗತ್ಯ ಎಲ್ಲಿ ಕಡಮೆಯೋ ಆ ಸಮಾಜ ಹೆಚ್ಚು ಸಭ್ಯ ಸಮಾಜ. ದಂಡ ಅಗತ್ಯ ವಿಲ್ಲ ಎಂದರೆ ಜನರಿಗೆ ಭಯ ಕಡಮೆ. ಅದು ಸುಸಂಸ್ಕೃತ ಸಮಾಜ. ಇದನ್ನು ವಿನೋಬಾಜೀ ಶಾಸನಮುಕ್ತ ಸಮಾಜ, ದಂಡನಿರಪೇಕ್ಷ ಸಮಾಜ ಎನ್ನುತ್ತಾರೆ. ಇದು ಅರಾಜಕತೆಯಲ್ಲ, ಅವ್ಯವಸ್ಥೆಯಲ್ಲ. ಶಾಸನಮುಕ್ತ ಸಮಾಜ. ಏನು ಹೇಳುತ್ತದೆ ಇದು? ನನಗೂ ನೆರೆಯುವನಿಗೂ ನಡುವೆ ಕಾನೂನು, ಜೈಲು, ಪೋಲೀಸರು ಬಾರದಿರಲಿ. ನನ್ನ ಹಾಗೂ ಇತರ ನಾಗರಿಕರ ನಡುವೆ ರಾಜ್ಯದ ಕೈವಾಡ ಆದಷ್ಟೂ ಕಡಮೆ ಇರಲಿ. ನಾಗರಿಕರ ಪರಸ್ಪರ ಸಂಬಂಧದಲ್ಲಿ ರಾಜ್ಯದ ಹಸ್ತಕ್ಷೇಪ ಆದಷ್ಟು ಕಡಮೆ ಇರಬೇಕು, ಇದೇ ನಿನ್ನೆ ಹೇಳಿದೆ. ಇದ್ದರೆ ಸಂಬಂಧ ಇದ್ದರೆ ಜವಾಬದಾರಿ ಬರುತ್ತದೆ. ನಮ್ಮ ನೆರೆಯುವರ ದುಷ್ಕೃತ್ಯ ಗಳಿಗೂ ನಾನು ಜವಾಬದಾರ, ಅಲ್ಲದೆ ಒಳ್ಳೆಯದಕ್ಕೂ ಜವಾಬದಾರ, ಇವರ ಶ್ರೇಯ, ಅದರ ದೋಷ ಎರಡರಲ್ಲೂ ಭಾಗಿ. ಇದೇ ನೆರೆಹೊರಿಕೆ, ತನ್ನಂತೆ ನೆರೆಯವರ ಬಗೆದವನೇ ಜವಾಬದಾರ. ನಾಗರಿಕ. ಇದೇ ಸಾಮಾಜಿಕತೆ.

ಈ ದೇಶದಲ್ಲಿ ಆದ ಪರಾಕ್ರಮದ ಶ್ರೇಯವನ್ನು ತೆಗೆದುಕೊಳ್ಳಲಿಲ್ಲ ಗಾಂಧೀ. ಈ ದೇಶದಲ್ಲಿ ಆದ ಹಿಂಸೆಯ ದೋಷವನ್ನು ಮಾತ್ರ ತಮ್ಮದು ಎಂದರು. ಅವರ ಆಶ್ರಮದಲ್ಲಿ, ದೇಶದಲ್ಲಿ ಆದ ಸಾರ್ವಜನಿಕ ಅಪರಾಧಗಳಿ ಗೆಲ್ಲ ನಾನೇ ಜವಾಬದಾರ, ನಾನೇ ದೋಷಿ ಎನ್ನುತ್ತಿದ್ದರು. ಜವಾಬದಾರ

ನಾಯಕರು ಅವರು. ಯಾವ ಕ್ಷೇತ್ರದಲ್ಲಿ ಹಿಂಸೆಯಾಗಲಿ ನಾನು ಜವಾಬದಾರ ಎನ್ನುತ್ತಿದ್ದರು. ಈಗಲೋ, ಚಳುವಳಿ ಸಫಲವಾದರೆ ಶ್ರೇಯ ನನ್ನದು. ಅದರಲ್ಲಿ ಹಿಂಸೆಯಾದರೆ ಪೋಲೀಸರ ದೌರ್ಜನ್ಯ ಅದಕ್ಕೆ ಕಾರಣ. ಆ ದೋಷ ನನ್ನದಲ್ಲ. ಇದು ಜವಾಬದಾರಿಯ ನಾಗರಿಕತೆಯಲ್ಲ.

(ಮುಂದುವರಿಯುವುದು)

★

೨೦ ನೇ ಪುಟದಿಂದ

ಎಲ್ಲ ಕ್ಷೇತ್ರಗಳಲ್ಲಿಯೂ ನೈತಿಕ ಶಕ್ತಿಯ ಅನುಷ್ಠಾನ ಮಾಡಲಾಗದಿದ್ದರೆ ಧಾರ್ಮಿಕ ಸಿದ್ಧಾಂತಗಳಿಗೆ ಔಪಯೋಗಿಕ ಮೌಲ್ಯಗಳೇ ಇಲ್ಲವಾಗುತ್ತದೆ,

"ಸ್ವರಾಜ್ಯ ಅಂದರೆ ವಿದೇಶಿ ನಿಯಂತ್ರಣದಿಂದ ಪೂರ್ಣ ಸ್ವಾತಂತ್ರ್ಯ ಮತ್ತು ಪೂರ್ಣ ಆರ್ಥಿಕ ಸ್ವಾತಂತ್ರ್ಯ ಒಂದು ಕೋನ. ಮತ್ತೊಂದು ಆರ್ಥಿಕ ಸ್ವಾವಲಂಬನೆಗೆ ಸ್ವಾತಂತ್ರ್ಯ. ಅದಕ್ಕೆ ಮತ್ತೆರಡು ಕೋನಗಳುಂಟು ; ಒಂದು ನೈತಿಕ ಮತ್ತು ಸಾಮಾಜಿಕ. ಅದಕ್ಕನುಗುಣವಾದ ಧರ್ಮ ಮತ್ತೊಂದು. ಅತ್ಯಂತ ಪೂರ್ಣಾರ್ಥದಲ್ಲಿ ಅಂಗೀಕರಿಸಬೇಕಾದ ಧರ್ಮ ಅದು. ಇದನ್ನು ಸ್ವರಾಜ್ಯದ ಚಚೌಕ ಎಂದು ಕರೆಯೋಣ. ಯಾವ ಒಂದು ಕೋನ ಮುಕ್ಕಾದರೂ ಅದರ ಸ್ವರೂಪವೇ ನಾಶವಾದೀತು.★

 ೮ ನೇ ಪುಟದಿಂದ

ಬ್ರಹ್ಮ ನಿಷ್ಕಲಮಹಂ ನ ಚ ಭೂತಸಂಘಃ. ಈ ಕುರಿತು ಕಿಶೋರ ಲಾಲ್‌ಭಾಯಿ ಮತ್ತು ನನ್ನ ಜಗಳವಾಗುತ್ತಿತ್ತು. ಅವರು, "ಈ ಶ್ಲೋಕ ನನಗೆ ಎಳ್ಳಷ್ಟೂ ಹಿಡಿಸುವುದಿಲ್ಲ. ನನಗೆ ಇದರ ಅನುಭವವಿಲ್ಲ. ಬೆಳಗಿನಿಂದ ಸಂಜೆ ವರೆಗೆ ತಿನ್ನುವುದು, ಕುಡಿಯುವುದು, ಸ್ನಾನ ಎಲ್ಲ ಶಾರೀರಿಕ ಕಾರ್ಯ ನಡೀತಾ ಇರುತ್ತದೆ. ಕೆಲವೊಮ್ಮೆ ಯೋಚನೆ ಮಾಡಿದಾಗ ನಾನು ದೇಹದಿಂದ ಬೇರೆ ಎಂಬ ವಿಚಾರವೇನೋ ಬರಬಹುದು. ಇದು ಬಹಳ ಹೆಚ್ಚೆಂದರೆ ಐದು-ಹತ್ತು ನಿಮಿಷ. ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಹತ್ತು-ಇಪ್ಪತ್ತು ನಿಮಿಷ ಬಿಟ್ಟರೆ ಇಡೀ ಸಮಯ ದೇಹದ ಸೇವೆ ಮತ್ತು ದೇಹಮಯತೆಯಲ್ಲಿಯೇ ಕಳೆದುಹೋಗು ತ್ತದೆ. ಆದ್ದರಿಂದ 'ನಾನು ದೇಹವಲ್ಲ, ಆತ್ಮ' ಎಂದು ಹೇಳುವುದು ನನಗೆ ಗೌಣವೆನಿಸುತ್ತದೆ. ಆದ್ದರಿಂದ ನಾನು ಈ ಶ್ಲೋಕ ಹೇಳುವುದಿಲ್ಲ" ಎಂಬುದಾಗಿ ನನ್ನ ಬಳಿ ಅಭಿಪ್ರಾಯ ಸೂಚಿಸುತ್ತಿದ್ದರು. ಆಗ ನಾನು ಅವರಿಗೆ "ಇದರಲ್ಲಿರುವ ಭ್ರಮೆ ಉಪಾಸನೆಗೆ ಸಂಬಂಧಿಸಿದ್ದು" ಎಂದು ತಿಳುವಳಿಕೆ ಕೊಡುತ್ತಿದ್ದೆ. ನಮ್ಮಲ್ಲಿಯ ಈ ವಾದ ಕೊನೆಗೊಂಡಿತು. ಅವರ ಅಂತಿಮ ದಿನಗಳಲ್ಲಿ ಅವರಿಂದ ಒಂದು ಪತ್ರ ಬಂದಿತು. ಅದರಲ್ಲಿ ಅವರು, "ಯಾವ ಶ್ಲೋಕದ ಬಗ್ಗೆ ನನಗೆ ಮೊದಲು ಆಕ್ಷೇಪಣೆಯಿತ್ತೋ ಆ ಶ್ಲೋಕವೇ ನನಗೆ ಹೆಚ್ಚು ಶ್ರೇಷ್ಠವೆಂದೆನಿಸು ತ್ತಿದೆ ಮತ್ತು ಆ ಶ್ಲೋಕವು ನನ್ನ ಕೆಲಸಕ್ಕೆ ಬರುತ್ತಿದೆ" ಎಂದು ಬರೆದಿದ್ದರು.

ಅವರು ನನಗೆ ಬರೆದ ಕೊನೆ ಪತ್ರದಲ್ಲಿ ಧರ್ಮನಿಷ್ಠ ಪುರುಷನ ಮನೋ ವೃತ್ತಿಯ ಬಗ್ಗೆ ಇತ್ತು. ಈ ವಿಷಯದಲ್ಲಿಯೂ ಅವರ ಅಮೂಲ್ಯವಾದ ಅಭಿ ಪ್ರಾಯಗಳಿದ್ದವೆಂಬುದು ಆಶ್ಚರ್ಯಕರ ಸಂಗತಿ. ಹರಿಜನ ಪತ್ರಿಕೆಯ ಸಂಪಾದನೆ, ಪತ್ರ-ವ್ಯವಹಾರ ಇತ್ಯಾದಿ ಕೆಲಸಗಳಲ್ಲಿ ತೊಡಗಿದ್ದರೂ ಸಹ ನಿರಂತರವಾಗಿ ಆತ್ಮಚಿಂತನೆ ಮಾಡುತ್ತಿದ್ದರು. ಅವರ ಈ ಶಕ್ತಿಯನ್ನು ಗುರುತಿಸುವುದು, ಅವರ ಅಂತರಂಗದ ಆಳವನ್ನು ಅಳೆಯುವುದು ಯಾವುದೇ ಸಾಮಾನ್ಯ ಮನು ಷ್ಯನ ಕೆಲಸವಲ್ಲ. ನಮ್ಮ ಶಾಸ್ತ್ರಕಾರರು, "ಜ್ಞಾನ ಇಲ್ಲದೆ ಮುಕ್ತಿ ಇಲ್ಲ" ಎಂದು ಹೇಳುತ್ತಾರೆ. ಇಲ್ಲಿ ಮುಕ್ತಿ ಶಬ್ದವನ್ನು ನಾನು ಜೀವನ್ಮುಕ್ತಿ ಎಂಬ ಅರ್ಥದಲ್ಲಿ ತೆಗೆದುಕೊಳ್ಳುತ್ತೇನೆ.

ಕಿಶೋರಲಾಲ್‌ಭಾಯಿಯವರ ಸ್ಮರಣೆ ಗೋಮತಿಬಹನ್ ಅವರ ಸ್ಮರಣೆ ಮಾಡದೆ ಪೂರ್ಣವಾಗುವುದಿಲ್ಲ. ನಮ್ಮ ಸಂಸ್ಕೃತಿಯಲ್ಲಿ ಪತ್ನಿಯನ್ನು ಅರ್ಧಾಂಗಿನಿ ಎಂದು ತಿಳಿಯಲಾಗಿದೆ. ಗೋಮತಿಬಹನ್ ಅರ್ಧಾಂಗಿನಿ ಶಬ್ದ ವನ್ನು ಉನ್ನತ ಮಟ್ಟದವರೆಗೆ ಸಾರ್ಥಕ ಮಾಡಿತೋರಿಸಿದ್ದಾರೆ. ಅವರು

ಅವರ ಕರುಣೆಯಲ್ಲಿ ಕೂಡ ಸಹಧರ್ಮಿಣಿಯಾಗಿದ್ದರು. ಅವರಿಬ್ಬರೂ ಪತಿ ಪತ್ನಿಯರಾಗಿದ್ದರೂ ಕೂಡ ಅವರು ಯಾವಾಗಲೂ ವಾನಪ್ರಸ್ಥ ವೃತ್ತಿಯಲ್ಲಿ ರುತ್ತಿದ್ದರು. ಇದು ಸಾಮಾನ್ಯ ಸಂಗತಿಯಲ್ಲ. ಅಸಾಮಾನ್ಯವಾದುದು.

ಭಗವಾನ್ ಬುದ್ಧ ಊಟ ಮಾಡುವುದಕ್ಕೂ ಸ್ಮಶಾನದಲ್ಲಿ ಕೂಡಬೇಕೆಂಬ ಶಿಕ್ಷಣ ಕೊಟ್ಟಿದ್ದಾರೆ. ಇದರ ತಾತ್ಪರ್ಯ ಮರಣವನ್ನು ಎದುರಿಗಿಟ್ಟುಕೊಂಡು ಬದುಕಬೇಕು, ಮರಣದ ಬಗ್ಗೆ ಹೆದರಬೇಕಾಗಿಲ್ಲ. ಇಂಥದೇ ಚರಿತ್ರೆ ಕಿಶೋರಲಾಲಭಾಯಿಯವರದಾಗಿತ್ತು. ಸದಾ ಮರಣವನ್ನು ಎದುರಿಗಿಟ್ಟು ಕೊಂಡೂ ಅತ್ಯಂತ ನಿರ್ಭಯ ಜೀವನವನ್ನು ಅವರು ನಡೆಸಿದರು. ಬುದ್ಧ ಭಗವಾನ್ ಯಾವ ಗುಣಧರ್ಮದವರಾಗಿದ್ದರೋ ಅದೇ ಗುಣಧರ್ಮದವರಾಗಿ ದ್ದರು ಕಿಶೋರಲಾಲ್‌ಭಾಯಿ. ಅವರಂಥ ಮಹಾನ್ ಸಾಧಕ, ಬ್ರಹ್ಮನಿಷ್ಠ ಈಶ್ವರ ಪರಾಯಣ ಪುರುಷರು ನಮ್ಮಂಥವರಿಗೆ ಪಾವನ ಪ್ರಸಂಗದ ರೂಪ ದಲ್ಲಿ ಇದ್ದಾರೆ. ದೇವರು ಇಂಥ ಸತ್ಪುರುಷರನ್ನು ನಮ್ಮ ಉದ್ಧಾರಕ್ಕಾಗಿ ಕಳುಹಿಸಿದ್ದಕ್ಕಾಗಿ ನಾನು ಅವನಿಗೆ ಬಹಳ ಕೃತಜ್ಞನಾಗಿದ್ದೇನೆ. ★

('ಮೈತ್ರಿ' ಸಾಭಾರ ಅನು : ಸು.ಕೌ.)

ವಿಚಾರ ದೀಪ್ತಿ..............

ಬದುಕಿನ ಜಂಜಾಟವು ಹಿಂದೆ ಮಹಾಭಾರತದ ಕಾಲಕ್ಕೂ ಇತ್ತು. ಈಗಲೂ ಇದೆ. ಜಂಜಾಟ ಯಾವಾಗಲೂ ಇದ್ದದ್ದೇ. ಆದರೆ ಸಂಸ್ಕೃತಿ ಇರುವುದು ಈ ಜಂಜಾಟದ ನಡುವೆಯೇ. ಇಂದು ಬದುಕಿಗಾಗಿ ದುಡಿಯುವ ವರ್ಗ ಮತ್ತು ವೃತ್ತಿನಿರತರಲ್ಲಿ ಸಂಸ್ಕೃತಿ ಮಾಯವಾಗುತ್ತಿದೆ. ಇದಕ್ಕೆ ಕಾರಣ ಅವರಿಗೆ ಬಿಡುವು ಸಿಗದೇ ಇರುವುದು. ಬಡವರಿಗೆ ಸಾಕಷ್ಟು ಬಿಡುವು ಸಿಗವುದರಿಂದ ಅವರಲ್ಲಿ ಕಲೆ – ಸಂಸ್ಕೃತಿ ಜೀವಂತವಾಗಿದೆ. ಮಹಾನಗರಗಳಲ್ಲಿಯ ಜನರಿಗೆ ಕುಮಾರವ್ಯಾಸನ ಕೃತಿ ಓದಿ ಹೇಳಿದರೆ ಅವರಿಗೆ ತಿಳಿಯುವುದಿಲ್ಲ. ಆದರೆ ಹಳ್ಳಿಗರಿಗೆ ಹೇಳಿದರೆ ಸಂಪೂರ್ಣ ಅರ್ಥವಾಗುತ್ತದೆ.

ಎಲ್ಲಿ ಅತಿ ಶ್ರೀಮಂತಿಕೆ ಇದೆಯೋ ಅಲ್ಲಿ ಸಂಸ್ಕೃತಿ ನಶಿಸುತ್ತ ಹೋಗುತ್ತಿದೆ. ಯಾವ ದೇಶದಲ್ಲಿ ಬಡತನ ಇದೆಯೋ ಅಲ್ಲಿ ಸಂಸ್ಕೃತಿ ಹೆಚ್ಚು ಆಳವಾಗಿರುತ್ತದೆ. ಸಮಾನತೆಯ ಹಸಿವು ಮತ್ತು ದೇವರ ಹಸಿವು ಈ ಎರಡೂ ಹಸಿವು ಇದ್ದ ಕಡೆಗೆಲ್ಲ ಸಂಸ್ಕೃತಿ ಹೆಚ್ಚು ಪ್ರಭಾವಿಯಾಗಿರುತ್ತದೆ. ಸಣ್ಣ ಸಣ್ಣ ಗ್ರಾಮಗಳಲ್ಲಿ ವಿವಿಧ ರೀತಿಯ ಕಸಬುಗಳಲ್ಲಿ ತೊಡಗಿರುವ ಜನರಲ್ಲಿ ಹಲವಾರು ತರಹದ ಸಂಗೀತ. ನಾಟಕ. ಸಾಹಿತ್ಯ. ಕಲೆಗಳು ಜೀವಂತವಾಗಿರುತ್ತವೆ.

– ಯು. ಆರ್. ಅನಂತಮೂರ್ತಿ

ಈ ಭಾರತ ಬದಲಾಗಬೇಕಲ್ಲವೆ ?

–ಡಾ॥ ಪಾಟೀಲ ಪುಟ್ಟಪ್ಪ

ಹಸಿರು ಕ್ರಾಂತಿ ಬಂದು ಸಮೃದ್ಧಿ ಬಂದಿದೆಯೆಂದು ಹೇಳುತ್ತೇವೆ. ಆದರೆ ಆ ಸಮೃದ್ಧಿ ಎಲ್ಲರಿಗೂ ಬಂದಿಲ್ಲ. ಅರೆ ಹೊಟ್ಟೆ, ಬರಿ ಹೊಟ್ಟೆಯವರ ಪ್ರಶ್ನೆ ಇಲ್ಲಿ ಇದ್ದೇ ಇದೆ. ಭೂಮಿಯ ಕಣಜ ಕಿಕ್ಕಿರಿ ತುಂಬಿದ್ದರೂ ಬಡಬಗ್ಗರ ತುತ್ತಿನ ಚೀಲ ಬರಿದೋ ಬರಿದು ಎಂದು ರಾಷ್ಟ್ರಕವಿ ಬೇಂದ್ರೆ ವ್ಯಸನಪಟ್ಟಿದ್ದರು.

ಅವರು ಆ ಮಾತು ಹೇಳಿ ಎಪ್ಪತ್ತು ವರ್ಷಗಳೇ ಕಳೆದುಹೋಗಿವೆ. ಪರಿಸ್ಥಿತಿ ಬಹಳಷ್ಟು ಬದಲಾದಂತೆ ತೋರುತ್ತದೆ, ಆದರೆ ತೋರಿಕೆಯೇ ಬೇರೆ, ವಾಸ್ತವವೇ ಬೇರೆ.

ನಾವು ಏನನ್ನಾದರೂ ಮುಚ್ಚಿಕೊಳ್ಳಬಹುದು.ನಮ್ಮ ಬಡತನವನ್ನು ಮುಚ್ಚಿಕೊಳ್ಳುವುದಕ್ಕೆ ಆಗಲಾರದು. ಆದರೆ ವಾಸ್ತವದ ಬಹುಕ್ರೂರ ವಿಪರ್ಯಾಸವೆಂಬಂತೆ ಅಧಿಕಾರದಅತ್ಯುಚ್ಚ ಸ್ಥಾನದಲ್ಲಿ ಇರುವ ಜನರು ಮೊಘಲರ ವೈಭವವನ್ನು ನಾಚಿಸುವಶ್ರೀಮಂತ ಶೈಲಿಯ ಜೀವನವನ್ನು ಇರಿಸಿಕೊಂಡಿದ್ದಾರೆ. ಕೆಳಗೆ ಇರುವವರು ಅವರು ಇರುವಂತೆಯೇ ಇರಬೇಕು, ಅವರು ಮಾಡಿದಂತೆಯೇ ಮಾಡಬೇಕೆನ್ನುತ್ತಾರೆ.

ಹಿಂದೆ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿ ಆಗಿದ್ದಾಗ ಅಮೆರಿಕಕ್ಕೆ ಹೋಗಿದ್ದರು. ಡಿಪಾರ್ಟ್‌ಮೆಂಟಲ್ ಸ್ಟೋರಿಗೆ ಭೇಟಿ ಕೊಟ್ಟರು. ಅಲ್ಲಿ ಅವರು ತಮಗೆ ಎರಡು ವಸ್ತು ಬೇಕೆಂದು ಕೇಳಿದರು. ಒಂದು ಪೆಟ್ಟೀ ಕೋಟು, ಇನ್ನೊಂದು ಕಣ್ಣಿಗೆ ಹಚ್ಚುವ ಕಾಡಿಗೆ. ಭಾರತದ ರೈಲ್ವೆ ಸ್ಟೇಷನ್‌ಗಳಲ್ಲಿ ಆಗ 'ಬೀ ಇಂಡಿಯನ್, ಬೈ ಇಂಡಿಯನ್' 'ಭಾರತೀಯರಾಗಿರಿ, ಭಾರತದ ವಸ್ತುಗಳನ್ನೇ ಕೊಳ್ಳಿರಿ', ಎಂಬ ಬರಹ ಕಾಣುತ್ತಿತ್ತು. ಭಾರತದ ಪ್ರಧಾನ ಮಂತ್ರಿಗೆ ಭಾರತದಲ್ಲಿ, ಪೆಟ್ಟೀ ಕೋಟು, ಕಣ್ಣಿಗೆ ಹಚ್ಚುವ ಕಾಡಿಗೆ ಸಿಕ್ಕುತ್ತಿರಲಿಲ್ಲವೇ? ಉಚ್ಚಸ್ಥಾನದಲ್ಲಿ ಇರುವವರು ಆ ರೀತಿ ನಡೆದುಕೊಂಡರೆ ಜನರು ಅವರ ಬಗ್ಗೆ ವಿಶ್ವಾಸಕಳೆದುಕೊಳ್ಳುತ್ತಾರೆ. ಪ್ರಧಾನಮಂತ್ರಿ ಅಟಲಬಿಹಾರಿ ವಾಜಪೇಯಿಯವರು ವಿಶ್ವಸಂಸ್ಥೆಯ ಸಹಸ್ರಮಾನದ ಶೃಂಗಸಭೆಗಾಗಿ ಅಮೇರಿಕಕ್ಕೆ ಹೋದುದು ಸರಿಯಷ್ಟೇ. ಈ ಹಿಂದೆ ಭಾರತದ ಬೇರೆ ಪ್ರಧಾನಮಂತ್ರಿಗಳೂ, ನೆಹರೂರಿಂದ ಹಿಡಿದು ನರಸಿಂಹ ರಾವ್‌ವರೆಗೆ, ಹೋಗಿಬಂದಿದ್ದಾರೆ. ಅವರು ಯಾರೊಬ್ಬರೂ ತಮ್ಮ ಅಡುಗೆ

ಸಿದ್ಧಪಡಿಸಲು ಬಾಣಸಿಗರನ್ನು ಇಲ್ಲಿಂದ ಕರೆದುಕೊಂಡು ಹೋಗಿರಲಿಲ್ಲ. ತಾಜ್ ಗುಂಪಿಗೆ ಸೇರಿದ ಹೋಟೆಲಿನಿಂದ ಇಬ್ಬರು ನಿಷ್ಣಾತ ಅಡುಗೆಯುವರನ್ನು ವಾಜಪೇಯಿಯವರು ತಮ್ಮೊಂದಿಗೆ ಕರೆದುಕೊಂಡು ಹೋದರು. ಅವರಿಗೋಸ್ಕರ ಭಾರತದ ರುಚಿಕರ ಭಕ್ಷ್ಯಭೋಜ್ಯ ಸಿದ್ಧಪಡಿಸಲು ಬೇಕಲ್ಲವೆ? ಅವರ ಭೋಜನಕ್ಕೋಸ್ಕರ ಏನೇನು ಸಿದ್ಧಪಡಿಸಿದ್ದರು ಎನ್ನುವುದನ್ನು ಓದಿದ ಜನರ ಬಾಯಲ್ಲಿ ನೀರೂರುತ್ತದೆ. ಹೊಟ್ಟೆಗಿಲ್ಲದವರು ತಮ್ಮ ಉಗುಳನ್ನು ನುಂಗಿಯೇ ಊಟವಾಯಿತೆನ್ನುವ ಸಂತೃಪ್ತಿಯನ್ನು ಪಟ್ಟುಕೊಳ್ಳಬೇಕು. ವಾಜಪೇಯಿಯವರ ವೈದ್ಯರು, ಹೆಚ್ಚು ಕ್ಯಾಲರಿ ಇರುವ ಆಹಾರ ಸೇವನೆ ಮಾಡಿ ದೇಹದ ತೂಕವನ್ನು ಹೆಚ್ಚಿಸಿಕೊಳ್ಳಬಾರದೆಂದು ಅವರಿಗೆ ಎಚ್ಚರಿಕೆ ಹೇಳುತ್ತಲೇ ಇದ್ದಾರೆ. ಅವರ ಮಂಡಿಯ ನೋವಿಗೆ, ಅವರ ದೇಹದ ಭಾರವೂ ಒಂದು ಕಾರಣವೆಂದು ಆ ವೈದ್ಯರು ತಿಳಿಸಿದ್ದಾರೆ. ಕಾಲು ಸರಿಯಿದ್ದರೆ ನಮ್ಮ ಕಾಲ ಸರಿಯಿರುತ್ತದೆ. ಪ್ರಧಾನಮಂತ್ರಿಗಳು ತಮ್ಮ ಮೊಳಕಾಲು ನೋವಿನ ಬಗೆಗೆ ನ್ಯೂಯಾರ್ಕ್ ವಾಸ್ತವ್ಯದ ಕಾಲಕ್ಕೆ ಸಲಹೆ ಪಡೆದುಕೊಂಡರು. ವಿದೇಶದಲ್ಲಿ ಸಲಹೆ ಪಡೆಯಬೇಕು, ಚಿಕಿತ್ಸೆ ಪಡೆಯಬೇಕು ಎನ್ನುವುದೇನೋ ಸರಿ. ಆದರೆ ಸ್ವದೇಶದ ಪರಿಣತಿಯ ಬಗೆಗೆ ಆತ್ಮವಿಶ್ವಾಸವೇಕೆ?

ಭಾರತದಲ್ಲಿ ಕೀಲು ಮೂಳೆಗಳ ತಜ್ಞರಿಗೇನೂ ಕೊರತೆಯಿಲ್ಲ. ನಮ್ಮ ಪರಿಣಿತರ ಬಗೆಗೆ ನಮ್ಮಲ್ಲಿ ಕೀಳರಿಮೆ. ವಿದೇಶದಲ್ಲಿ ಇರುವವರೇ ತಜ್ಞರೆನ್ನುವ ತಪ್ಪು ತಿಳುವಳಿಕೆ ಬೆಳೆದುಕೊಂಡಿದೆ. ನಮ್ಮ ದೇಶದಲ್ಲಿರುವ ತಜ್ಞರು ನಮ್ಮ ಪ್ರಧಾನ ಮಂತ್ರಿಗಳಿಗೆ ಚಿಕಿತ್ಸೆ ಒದಗಿಸಲು ಅನರ್ಹರೆನಿಸಿದರೆ ದೇಶದ ಇನ್ನುಳಿದ ಜನರಿಗೆ ಚಿಕಿತ್ಸೆ ಒದಗಿಸಲು ಹೇಗೆ ಅರ್ಹರೆನಿಸುತ್ತಾರೆ? ಜಗತ್ತಿನ ಬೇರೆ ಯಾವುದೇ ದೇಶ ಒದಗಿಸಬಹುದಾದ ಶ್ರೇಷ್ಠ ವೈದ್ಯಕೀಯ ಚಿಕಿತ್ಸೆ ಇಂದು ಭಾರತದಲ್ಲಿ ಲಭ್ಯವಿದೆ. ಹೀಗಿರುವಾಗ ಕುರುಡು ವಿದೇಶಿ ಮೋಹ ಏಕೆ? ಹಿಂದೆ, ನಮ್ಮ ರಾಷ್ಟ್ರಪತಿ ಆಗಿದ್ದ ದಾರ್ಶನಿಕ ತತ್ವಜ್ಞಾನಿ ಡಾ॥ ರಾಧಾಕೃಷ್ಣನ್ ಅವರು ನೇತ್ರ ಚಿಕಿತ್ಸೆ ಪಡೆಯಲು ಇಂಗ್ಲೆಂಡಿಗೆ ಹೋಗಿ, ಅಲ್ಲಿಯ ನೇತ್ರ ಶಸ್ತ್ರ ಚಿಕಿತ್ಸೆಯಲ್ಲಿ ತಮ್ಮ ಒಂದು ಕಣ್ಣು ಕಳೆದುಕೊಂಡು ಭಾರತಕ್ಕೆ ಮರಳಿ ಬಂದರು. ಚಲನಚಿತ್ರ ನಟಿ ಶ್ರೀದೇವಿ ತಾಯಿಯ ತಲೆಗೆ ಪೆಟ್ಟು ಬಿದ್ದಿತು. ಆ ನಟಿ ತನ್ನ ತಾಯಿಯನ್ನು ಕರೆದುಕೊಂಡು ಶಸ್ತ್ರಚಿಕಿತ್ಸೆ ಮಾಡಿಸಲೆಂದು ಅಮೇರಿಕಕ್ಕೆ ಹೋದಳು. ಅಲ್ಲಿ ಆ ತಾಯಿಯ ತಲೆಗೆ ಶಸ್ತ್ರಚಿಕಿತ್ಸೆ ಮಾಡಿದರು. ಅಲ್ಲಿಯ ವೈದ್ಯರಿಂದ ಒಂದು ದೊಡ್ಡ ಪ್ರಮಾದ ಘಟಿಸಿದ್ದಿತ್ತು. ಪೆಟ್ಟಾದ ಭಾಗಕ್ಕೆ ಶಸ್ತ್ರಚಿಕಿತ್ಸೆ ಮಾಡದೆ ಬೇರೊಂದು ಭಾಗಕ್ಕೆ ಮಾಡಿದ್ದರು.

ಆಕೆ ಜೀವ ತೆತ್ತಳು.

ಬಹು ದೊಡ್ಡ ಅಧಿಕಾರದ ಅಂತಸ್ತಿನಲ್ಲಿರುವ ಭಾಮಜರು (ಭಾರೀ ಮಹತ್ವದ ಜನರು- ವಿಐಪಿ) ಇಂಗ್ಲೆಂಡಿಗೋ ಅಮೆರಿಕಕ್ಕೋ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದು ತಾವೂ ಭಾಮಜರೆನಿಸಿಕೊಳ್ಳಬೇಕೆನ್ನುವ ಜನರಿಗೆ ತಪ್ಪು ಸಂಕೇತಗಳನ್ನು ನೀಡುತ್ತಿದ್ದಾರೆ.

ರಾಜ್ಯ ಹಾಗೂ ಕೇಂದ್ರದ ಮಂತ್ರಿಗಳಿಗೂ ಫಾರಿನ್ ಮೋಹ ಬಡಿದು ಕೊಂಡಿದೆ. ಹಿಂದೆ ಕೇಂದ್ರದಲ್ಲಿ ಮಂತ್ರಿಯಾಗಿದ್ದ ಕಲ್ಪನಾಥರಾಯ್ ತಮ್ಮ ಹೆಂಡತಿಯ ಹೆರಿಗೆ ಲಂಡನ್‌ನಲ್ಲಿಯೇ ಆಗಬೇಕೆಂದು ಆಕೆಯನ್ನು ಇಂಗ್ಲೆಂಡಿಗೆ ಕರೆದುಕೊಂಡುಹೋದರು. ಇನ್ನು ಕೆಲವರು ತಮ್ಮ ಕಾಯಿಲೆ ಎಂಥದೆನ್ನುವುದು ಭಾರತದಲ್ಲಿಯಾರಿಗೂ ತಿಳಿಯಬಾರದೆಂದು, ತಮ್ಮ ವೈದ್ಯಕೀಯ ಚಿಕಿತ್ಸೆಗೋಸುಗ ಅಮೆರಿಕಕ್ಕೋ, ಇಂಗ್ಲೆಂಡಿಗೋ ಹೋಗುತ್ತಾರೆ. ಆ ಮಾತು ಬೇರೆ.

ನಮ್ಮ ಪ್ರಧಾನಮಂತ್ರಿಗಳು ಅಮೇರಿಕದಲ್ಲಿ ಜಾತೀಯ ಸಂಘಟನೆಗಳ ಒಂದು ಸಮಾವೇಶದಲ್ಲಿ ಭಾಗವಹಿಸಿದಾಗ ತಾವು ಸ್ವಯಂ ಸೇವಕರಾಗಿ ಬೆಳೆದಿರುವುದಾಗಿಯೂ, ಇರುವುದಾಗಿಯೂ ಹೇಳಿ ತಮ್ಮ ಅಧಿಕಾರ ಮುಗಿದ ಮೇಲೆಯೂ ತಾವು ಸ್ವಯಂ ಸೇವಕರಾಗಿಯೇ ಉಳಿಯುವುದಾಗಿಯೂ ತಿಳಿಸಿ, ಅಲ್ಲಿ ಸೇರಿದ್ದ ಸನ್ಯಾಸಿಗಳಿಂದ ವಿಶ್ವಹಿಂದೂ ಪರಿಷತ್ತಿನ ಬೆಂಬಲಿಗರಿಂದ ಪ್ರಚಂಡ ಕರತಾಡನ ಪಡೆದುಕೊಂಡರು. ಆ ಹೇಳಿಕೆಯಿಂದ ಅಟಲಬಿಹಾರಿ ವಾಜಪೇಯಿಯವರು ಬಹು ಉದಾರ ಮತಿಗಳೆನ್ನುವಾಗ ತಮ್ಮ ಪ್ರತಿಮೆಗೆ ಪ್ರತೀತಿಗೆ ಭಾರಿ ಧಕ್ಕೆಯನ್ನು ತಂದುಕೊಂಡರು. ಪತ್ರಿಕೆಗಳಲ್ಲಿ ಅವರ ಹೇಳಿಕೆಯ ಬಗೆಗೆ ಬಹಳಷ್ಟು ಟೀಕೆ ಬಂದಮೇಲೆ ತಾವು ಹೇಳಿದ ಮಾತನ್ನು ಹೊರಳಿಸಿ ಅವರು ಭಾರತದ ಸ್ವಯಂಸೇವಕರೆಂದು ಯಾವ ಅರ್ಥದಲ್ಲಿ ಹೇಳಿದ್ದರೆನ್ನುವ ವಿಚಾರದಲ್ಲಿ ಯಾರಲ್ಲಿಯೂ ಯಾವುದೇ ವಿಧದ ಸಂದೇಹವೂ ಇಲ್ಲ.

ಭಾರತದ ಪ್ರಥಮ ಪ್ರಧಾನಮಂತ್ರಿ, ಜವಾಹರಲಾಲ ನೆಹರೂ, ತಮ್ಮನ್ನು ದೇಶದ ಪ್ರಥಮ ಸೇವಕ ಎಂದುಕೊಂಡಿದ್ದರು. ಆದರೆ, ಆ ಸೇವಕರಿಗೂ ಈ ನೂತನ ಸೇವಕರಿಗೂ ಯಾವ ವಿಧದಲ್ಲಿಯೂ ಸಾಮ್ಯ ಇಲ್ಲ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ. ಈ ಭಾರತ ಬದಲಾಗಬೇಕೆಂದು ನಮಗೆ ಅನಿಸುವುದಿಲ್ಲವೆ?

('ಪ್ರಜಾವಾಣಿ' ಸಾಭಾರ)

ರಾಜಕೀಯ ಭ್ರಷ್ಟಾಚಾರದ ಬೇರನ್ನು ಕೀಳಬಹುದೆ?

- ಎನ್. ವಿಠಲ್

ಅಧ್ಯಕ್ಷರು, ಕೇಂದ್ರ ಜಾಗೃತ ಆಯೋಗ

ನಾನು ಈ ವರೆಗೆ ಕೇಂದ್ರ ಜಾಗೃತಾ ಆಯೋಗದ ಅಧ್ಯಕ್ಷನಾಗಿ ಎರಡು ವರ್ಷ ಕಾರ್ಯನಿರ್ವಹಿಸಿದ್ದೇನೆ ಮತ್ತು ಇನ್ನು ಎರಡು ವರ್ಷ ಬಾಕಿ ಇದೆ. ನನ್ನ ಸೇವೆಯ ಈ ಮಧ್ಯಂತರ ಅವಧಿಯಲ್ಲಿ ಕೇಂದ್ರ ಸರ್ಕಾರದ ಸಾರ್ವಜನಿಕ ನೌಕರರಲ್ಲಿಯ ಭ್ರಷ್ಟಾಚಾರದ ಬಗ್ಗೆ ನಾನು ನೋಡಲು ಪ್ರಯತ್ನಿಸಿದಾಗ ಭ್ರಷ್ಟಾಚಾರವೆಂಬುದು ಭಾರತದ ಸರ್ವವ್ಯಾಪಿ ಬೆಳವಣಿಗೆಯೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ ಸಾರ್ವಜನಿಕ ನೌಕರರಿಗೆ ಮಾತ್ರ ನನ್ನ ಅಧಿಕೃತ ಕಾರ್ಯವ್ಯಾಪ್ತಿ ಸೀಮಿತವಾಗಿದ್ದರೂ ನಾನು ನನಗೆ ಸಾಧ್ಯವಾದಷ್ಟು ಸಮಾಜದ ಇತರ ವಿಭಾಗಗಳಲ್ಲಿಯೂ ಭ್ರಷ್ಟಾಚಾರದ ಬಗ್ಗೆ ಪ್ರಕ್ರಿಯೆಗಳನ್ನು ಅಥವಾ ಗಂಭೀರ ಸ್ವರೂಪದ ಆಲೋಚನೆಯನ್ನು ಪ್ರಾರಂಭಿಸದಿದ್ದರೆ ಭ್ರಷ್ಟಚಾರದ ನಿರ್ಮೂಲನದ ಕೆಲಸದಲ್ಲಿ ನಾನು ಸಫಲನಾಗುವುದಿಲ್ಲ.

ನಮ್ಮ ರಾಜ್ಯವ್ಯವಸ್ಥೆಯಲ್ಲಿ ಮೂರು ಸ್ತಂಭಗಳಿವೆ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ. ನ್ಯಾಯಾಂಗದ ಮಟ್ಟಿಗೆ ಹೇಳುವುದಾದರೆ ೧೯೭೧ರಲ್ಲಿ ಅಂಗೀಕೃತವಾದ **ನ್ಯಾಯಾಲಯ ನಿಂದನಾ ಶಾಸನ** ಒಂದು ರೀತಿಯಲ್ಲಿ ಆ ವಿಭಾಗಕ್ಕೆ ಬ್ರಹ್ಮಾಸ್ತ್ರ ಅಥವಾ ರಕ್ಷಾಕವಚವಿದ್ದಂತೆ ಇದೆ. ಆದ್ದರಿಂದ ವಸ್ತುನಿಷ್ಠವಾದ ಟೀಕೆಯನ್ನು ಮಾಡುವ ಪ್ರಯತ್ನವೂ ಸಹ ನ್ಯಾಯಾಲಯದ ನಿಂದನೆಯ ಆಪತ್ತಿಗೆ ಒಳಗಾಗುವ ಸಾಧ್ಯತೆ ಇದೆ; ಸತ್ಯವು ನ್ಯಾಯಲಾಯದಿಂದ ನಿಮ್ಮನ್ನು ರಕ್ಷಿಸಲಾರದು. ಆದ್ದರಿಂದ ನಾನು ನ್ಯಾಯಾಂಗವನ್ನು ಅದರ ಪಾಡಿಗೇ ಬಿಡುತ್ತೇನೆ. ಇನ್ನು ಕಾರ್ಯಾಂಗವು ರಾಜಕೀಯ ವ್ಯಕ್ತಿಗಳನ್ನೂ ಮತ್ತು ನೌಕರಶಾಯಿಯನ್ನೂ ಒಳಗೊಂಡಿದೆ. ಶಾಸಕಾಂಗವು ರಾಜಕೀಯ ನಾಯಕರ ಕ್ಷೇತ್ರವಾಗಿದೆ.

ರಾಜಕೀಯ ಭ್ರಷ್ಟಾಚಾರವು ಉಳಿದೆಲ್ಲ ಭ್ರಷ್ಟಾಚಾರದ ಉಗಮಕ್ಕೆ ಮಹತ್ವಪೂರ್ಣ ಮೂಲವಾಗಿದೆಯಷ್ಟೇ ಅಲ್ಲ ನಮ್ಮ ದೇಶದ ಭ್ರಷ್ಟ ಸಂಸ್ಕೃತಿಯ ಬೇರೂ ಆದಾಗಿದೆ. ಸತ್ಯ ಸಂಗತಿಯೇನೆಂದರೆ, ನಮ್ಮ ಇಡೀ ರಾಜಕಾರಣ ಮತ್ತು ಚುನಾವಣಾ ಪದ್ಧತಿ ಕಪ್ಪುಹಣವನ್ನೇ ಅವಲಂಬಿಸಿದೆ.

(ಮುಂದುವರಿಯುವುದು)

ಜಾಹಿರಾತುದಾರರ ಗಮನಕ್ಕೆ

ಜನಪದ ವಿಚಾರವು ರಾಜ್ಯದ

ವಿಚಾರವಂತರ, ವಿದ್ಯಾರ್ಥಿಗಳ
ಹಾಗೂ
ವಿವಿಧ ಸಂಸ್ಥೆಗಳ
ಬಳಿ ತಲುಪುತ್ತಿದೆ.
ಇದರ ಲಾಭವನ್ನು
ಜಾಹಿರಾತುದಾರರು ಪಡೆಯಬೇಕಾಗಿ ವಿನಂತಿ.

ಜಾಹಿರಾತು ದರ:-

(1)	ಪೂರ್ತ ಪುಟ	2000/-ರೂ.
(2)	ಅರ್ಧ ಪುಟ	1000/-ರೂ.
(3)	ಕಾಲು ಪುಟ	500/-ರೂ.

ವರ್ಷವಿಡೀ ಜಾಹಿರಾತುದಾರರಿಗೆ ಬಹಳಷ್ಟು ರಿಯಾಯಿತಿ ಉಂಟು.
ಸಂಪರ್ಕಿಸಿ : ಪ್ರಕಾಶಕರು, ಜನಪದ ವಿಚಾರ,
ಮೇಲುಕೋಟೆ 571 431.

KA-SK-MND-470/2000

ತೆರೆದ-ಅಂಚೆ

To

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ ಮೇಲುಕೋಟೆಯಲ್ಲಿ ಸಂಪಾದಿತವಾಗಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.